# ಭಾರತದ ಗಣಿಗಳಲ್ಲಿ ಮಹಿಳಾ ಕಾರ್ಮಿಕರು:
# ಗಣಿ ಕಾರ್ಮಿಕರ ಹಕ್ಕುಗಳ ಸಂರಕ್ಷಕರ ಕೈಪಿಡಿ




ಮಹಿಳೆಯರು ಮತ್ತು ಮಕ್ಕಳಿಗಾಗಿ ಧಾತ್ರಿ ಸಂಪನ್ಮೂಲ ಕೇಂದ್ರ

ಮತ್ತು

ಸಮತಾ

ಭಾರತದ ಗಣಿಗಳಲ್ಲಿ ಮಹಿಳಾ ಕಾರ್ಮಿಕರು: ಗಣಿ ಕಾರ್ಮಿಕರ ಹಕ್ಕುಗಳ ಸಂರಕ್ಷಕರ ಕೈಪಿಡಿ

ಪ್ರಕಟಣೆ: ಡಿಸೆಂಬರ್ 2010

ಪ್ರಕಾಶಕರು
**ಮಹಿಳೆಯರು ಮತ್ತು ಮಕ್ಕಳಿಗಾಗಿ ಧಾತ್ರಿ ಸಂಪನ್ಮೂಲ ಕೇಂದ್ರ**
307, Manasarovar Heights, Phase I, Tirumalgiri
Secunderabad 500 009, Andhra Pradesh, India
Telephone: +91-40-40121365

ಮತ್ತು

**ಸಮತಾ**
D. No.: 14-37-9, First Floor, Krishna Nagar, Maharanipet
Visakhapatnam 530 002, Andhra Pradesh, India
Telefax: +91-891-2737662/2737653

Email: dhaatri@gmail.com, samataindia@gmail.com
Website: www.dhaatri.org , www.samataindia.org

ಸಹಾಯ:
ಹಿವೋಸ್, ನೆದರ್ಲೆಂಡ್ಸ್

ಇಂಗ್ಲಿಷಿನಲ್ಲಿ ಸಂಗ್ರಹ: ಭಾನುಮತಿ ಕಲ್ಲುರಿ ಮತ್ತು ಸೀಮಾ ಮುಂಡೋಲಿ
ಕನ್ನಡಕ್ಕೆ: ಸರೋಜಾ ಗಾಂವಕರ

ಈ ಪುಸ್ತಕವನ್ನು ಮೂಲ, 'ಭಾರತದ ಗಣಿಗಾರಿಕೆಯ ಆರ್ಥಿಕತೆಯಲ್ಲಿನ ರಾಜಕೀಯದಲ್ಲಿ ಮಹಿಳೆಯರ ಹಕ್ಕುಗಳ ಪ್ರಶ್ನೆಗಳು' ಎಂಬ ವರದಿಯನ್ನು ಆಧರಿಸಿ ಬರೆಯಲಾತದೆ. (ಕೆಳಗೆ ಹೇಳಿದ ವೆಬ್ ಸೈಟಿನಲ್ಲಿ ಅದು ಸಿಗುತ್ತದೆ.)ಈ ಪುಸ್ತಕದ ಯಾವುದೇ ಭಾಗವನ್ನು ಯಾರೇ ಬೇಕಾದರೂ ಬಳಸಬಹುದು. ಆ ಬಗ್ಗೆ ಎರಡು ಮಾತು ಬರೆದು ತಿಳಿಸುವುದು ಒಳಿತು.

# ಭಾರತದ ಗಣಿಗಳಲ್ಲಿ ಮಹಿಳಾ ಕಾರ್ಮಿಕರು: ಗಣಿ ಕಾರ್ಮಿಕರ ಹಕ್ಕುಗಳ ಸಂರಕ್ಷಕರ ಕೈಪಿಡಿ

ಮಹಿಳೆಯರು ಮತ್ತು ಮಕ್ಕಳಿಗಾಗಿ ಧಾತ್ರಿ ಸಂಪನ್ಮೂಲ ಕೇಂದ್ರ

ಮತ್ತು

ಸಮತಾ

# ಭಾರತದ ಗಣಿಗಳಲ್ಲಿ ಮಹಿಳಾ ಕಾರ್ಮಿಕರು: ಗಣಿ ಕಾರ್ಮಿಕರ ಹಕ್ಕುಗಳ ಸಂರಕ್ಷಕರ ಕೈಪಿಡಿ

**ಪೀಠಿಕೆ :**

ಗಣಿ ಕ್ಷೇತ್ರಗಳಲ್ಲಿನ ಆರ್ಥಿಕ ಹಾಗೂ ಉದ್ಯೋಗ ವ್ಯವಸ್ಥೆಯಲ್ಲಿ ಮಹಿಳಾ ಕಾರ್ಮಿಕರನ್ನು ಶೋಷಣೆ ಮಾಡುವುದು, ನಿರಾಕರಿಸುವುದು ಕಣ್ಣಿಗೆ ರಾಚುವಂತೆ ಇದ್ದರೂ ಸಹ ಅದು ಕಣ್ಣಿಗೆ ಕಾಣದಾಗಿದೆ. ಲಿಂಗ ಸೂಕ್ಷ್ಮತೆಯ ದೃಷ್ಟಿಯಿಂದ ಹೇಳಬಹುದಾದರೆ, ಗಣಿ ಉದ್ಯಮದಲ್ಲಿ ವಾಸ್ತವಿಕತೆ ಮತ್ತು ಒಪ್ಪಿಕೊಳ್ಳುವುದರ ನಡುವೆ, ಬಹು ದೊಡ್ಡ ವಿಪರ್ಯಾಸವೇ ಇದೆ. ಮಹಿಳೆಯರು ಗಣಿ ಉದ್ಯಮದಲ್ಲಿ ಮಹಿಳೆಯರು ಔಪಚಾರಿಕ ಕಾರ್ಮಿಕರ ಗುಂಪಿನ ಹೊರಗೇ ಪರಿಗಣಿಸಲ್ಪಡುವುದಾದರೂ ಸಹ, ಮಹಿಳಾ ಗಣಿ ಕಾರ್ಮಿಕರ ಬಹು ದೊಡ್ಡ ಸಂಖ್ಯೆಯೇ ಇದೆ ಎನ್ನುವುದು ಅಷ್ಟೇ ಸತ್ಯವಾದ ಸಂಗತಿಯಾಗಿದೆ. ಇದು ಪುರುಷ ಪ್ರಧಾನ ಉದ್ಯಮ, ಮಹಿಳೆಯರಿಗೆ ಹೊಂದುವ ಕ್ಷೇತ್ರ ಇದಲ್ಲ ಎಂದು ಪರಿಗಣಿಸಲ್ಪಟ್ಟಿದ್ದಾಗ್ಯೂ, ಭಾರತದಲ್ಲಿ ಗಣಿ ಉದ್ಯಮದಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿದ್ದು, ಖನಿಜವನ್ನು ಸಂಗ್ರಹಿಸುವ ಹಾಗೂ ಗಣಿ ಸಂಬಂಧಿ ಇನ್ನಿತರ ಚಟುವಟಿಕೆಗಳಲ್ಲಿ ಅವರು ಸಕ್ರಿಯರಾಗಿರುವುದು ಕಂಡುಬರುತ್ತಿದೆ. ಆದರೆ ಮಹಿಳಾ ಗಣಿ ಕಾರ್ಮಿಕರ ಹಕ್ಕನ್ನು, ಕಾನೂನು ಮೂಲಕವಾಗಿಯಾಗಲೀ ಅಥವಾ ಆರ್ಥಿಕವಾಗಿಯಾಗಲೀ ಸಂರಕ್ಷಿಸುವ, ಭದ್ರಪಡಿಸುವ ಕಾರ್ಯ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತಿದೆ. ಹಾಗಾಗಿಯೇ, ಬಹಳಷ್ಟು ಗಣಿಗಾರಿಕಾ ಸ್ಥಳಗಳಲ್ಲಿ ಮಹಿಳಾ ಕಾರ್ಮಿಕರ ವಿರುದ್ಧ ಮಾನವ ಹಕ್ಕು ಉಲ್ಲಂಘನೆ ಆಗುತ್ತಲೇ ಇದೆ.

ಈ ಕೈಪಿಡಿಯು, ಮಹಿಳಾ ಗಣಿ ಕಾರ್ಮಿಕರಿಗಾಗಿ ಹಾಗೂ ಗಣಿ ಕಾರ್ಮಿಕರ ಮತ್ತು ಅವರ ಕುಟುಂಬದವರ ಹಕ್ಕನ್ನು ಕಾಪಾಡುವವರಿಗಾಗಿ ಒಂದು ಸಾಧನವಾಗುವುದರಲ್ಲಿ ಸಂಶಯವಿಲ್ಲ. ಗಣಿ ಕ್ಷೇತ್ರದಲ್ಲಿ ಇರುವ ಲಿಂಗ ಪಕ್ಷಪಾತದ ಮೇಲೆ ಬೆಳಕು ಚೆಲ್ಲುವ ಕೆಲಸಕ್ಕೆ ಮತ್ತು ಮಹಿಳಾ ಗಣಿ ಕಾರ್ಮಿಕರ ಹಕ್ಕನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿರುವವರಿಗೆ, ಮಹಿಳಾ ಗಣಿ ಕಾರ್ಮಿಕರ ಹಕ್ಕು ಸಂರಕ್ಷಣೆಗಾಗಿ ಹೋರಾಡುವಂತಹ ಸಂಸ್ಥೆಗಳಿಗೆ, ನೆರವಾಗುವ ಆಶಯದಿಂದ ಈ ಕೈಪಿಡಿಯನ್ನು ಬರೆಯಲಾಗಿದೆ. ಈ ಕೈಪಿಡಿಯು **'ಭಾರತದ ಗಣಿಗಾರಿಕೆಯ ಆರ್ಥಿಕತೆಯಲ್ಲಿನ ರಾಜಕೀಯದಲ್ಲಿ ಮಹಿಳೆಯರ ಹಕ್ಕುಗಳ ಪ್ರಶ್ನೆಗಳು'** ("Contesting Women's Rights in the Political Economy of Mining in India") ಎನ್ನುವ ರಾಷ್ಟ್ರೀಯ ವರದಿಯಿಂದ ಸಂಗ್ರಹಿಸಿದ ಮಹಿಳಾ ಗಣಿ ಕಾರ್ಮಿಕರ ವಿಭಾಗದ ಸಂಕ್ಷಿಪ್ತ ಟಿಪ್ಪಣಿಯಾಗಿದೆ. ದೇಶದುದ್ದಕ್ಕೂ ಇರುವ ಗಣಿಗಳಲ್ಲಿನ ಮಹಿಳೆಯರ ಕೆಲಸದ ಸ್ಥಿತಿಗತಿಗಳ ಹಾಗೂ ಅವರು ವಾಸಿಸುವ ಬದುಕಿನ ಸಂಕ್ಷಿಪ್ತ ಚಿತ್ರವನ್ನು ಇಲ್ಲಿ ನೀಡಲಾಗಿದೆ. ಅದರಂತೆಯೇ, ೧೯೫೨ ರ ಗಣಿ ಕಾಯಿದೆಯು ಮಹಿಳೆಯರನ್ನು ಒಳಗೊಂಡಂತೆ ಕಾರ್ಮಿಕರ ಹಕ್ಕುಗಳ ಬಗ್ಗೆ ಏನು ಹೇಳುತ್ತದೆ ಎನ್ನುವುದನ್ನೂ ಹಾಗೂ ಇನ್ನುಳಿದ ಕಾನೂನಿನ ಪರಿಧಿಯಲ್ಲಿ ಮಹಿಳಾ ಕಾರ್ಮಿಕರಿಗೆ ಇರುವ ವಿಶೇಷ ಸವಲತ್ತುಗಳ ಚಿತ್ರಣವನ್ನೂ ನೀಡುತ್ತದೆ. ಇಷ್ಟೇ ಅಲ್ಲದೆ, ಮಹಿಳೆಯರನ್ನು ಒಳಗೊಂಡು ಅಸಂಘಟಿತ ಕಾರ್ಮಿಕ ವಲಯುಕ್ಕೆ ದೊರಕಬಹುದಾದ ಸಾಮಾಜಿಕ ಭದ್ರತಾ ಯೋಜನೆಗಳ ಹಾಗೂ ಮಹಿಳೆಯರ ಅಭಿವೃದ್ಧಿ ಹಾಗೂ ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ ದೇಶದಲ್ಲಿ ಇರುವ ಪ್ರಾಥಮಿಕ ಹಂತದ ಆಡಳಿತದ ವಿವರಗಳನ್ನೂ ಸಹ ನೀಡಲಾಗಿದೆ. ಆದ್ದಾಗ್ಯೂ, ಬೇರೆ ಬೇರೆ ರಾಜ್ಯಗಳಲ್ಲಿ ಇರುವ ಎಲ್ಲ ಯೋಜನೆಗಳ ಪಟ್ಟಿಯನ್ನು ನೀಡುವುದು ಅಸಾಧ್ಯವಾಗಿರುವುದರಿಂದ, ರಾಷ್ಟ್ರೀಯ ಮಟ್ಟದಲ್ಲಿ ಇರುವ ಯೋಜನೆಗಳ ಪಟ್ಟಿಯನ್ನು ಮಾತ್ರ ಇಲ್ಲಿ ನೀಡಲಾಗಿದೆ. ಅಂತಿಮವಾಗಿ, ಮಹಿಳಾ ಗಣಿಕಾರ್ಮಿಕರ ಹಕ್ಕನ್ನು ಸಂರಕ್ಷಿಸುವುದಕ್ಕಾಗಿ ಬಹಳಷ್ಟು ಶಿಫಾರಸ್ಸುಗಳನ್ನು ನೀಡಲಾಗಿದೆ. ಇವುಗಳೆಲ್ಲವೂ ಲಿಂಗ ಸಮಾನತೆ ತರುವಲ್ಲಿ, ಗಣಿಕಾರ್ಮಿಕರ ಸಮಸ್ಯೆಯ ಮೇಲೆ ನಾಗರೀಕ ಸಮಾಜದ ಸಂಘಟನೆಗಳ ಹೋರಾಟ ಹಾಗೂ ಪ್ರಭಾವ ಬೀರುವುದಕ್ಕೆ ಪರಿಣಾಮಕಾರಿಯಾಗಿ ಬಳಕೆ ಆಗಬಹುದೆನ್ನುವ ಆಶಯ ಈ ಕೈಪಿಡಿಯದಾಗಿದೆ.

**ಭಾರತದಲ್ಲಿ ಗಣಿ ಕ್ಷೇತ್ರದಲ್ಲಿನ ಮಹಿಳೆಯರ ವಸ್ತುಸ್ಥಿತಿ**

**ಗಣಿಯಲ್ಲಿ ಕೆಲಸ ಮಾಡುವ ಮಹಿಳೆಯರು ಯಾರು ?**

- ಬಹುತೇಕ ಮಹಿಳಾ ಗಣಿ ಕಾರ್ಮಿಕರು ದಲಿತರು ಹಾಗೂ ಆದಿವಾಸಿಗಳಾಗಿದ್ದಾರೆ.
- ಗಣಿ ಯೋಜನೆಗಳಿಂದಾಗಿ ತಮ್ಮ ಭೂಮಿ ಹಾಗೂ ಜೀವನಾಧಾರದಿಂದ ಹೊರದೂಡಲ್ಪಟ್ಟ ಮಹಿಳೆಯರು.
- ಭೂ ರಹಿತ ಕಾರ್ಮಿಕರು ಹಾಗೂ ಗುಳೆ ಹೋಗುವವರು.

- ನಿರ್ದಿಷ್ಟ ಗಣಿ ಚಟುವಟಿಕೆಗಳನ್ನು ನಡೆಸುವಂತಹ ಸಾಂಪ್ರದಾಯಿಕ ಸಮುದಾಯ: ಉದಾಹರಣೆಗೆ ಕಲ್ಲು ಒಡೆಯುವ ಕಾಯಕದಲ್ಲೇ ಇರುವ ವಡ್ಡರು.

- ಮಹಿಳಾ ಗಣಿ ಕಾರ್ಮಿಕರ ಆಯುಷ್ಯವೇ ಕಡಿಮೆ ಇರುವುದರಿಂದ ಈ ವಲಯದಲ್ಲಿ ಹದಿಹರೆಯದ ಹುಡುಗಿಯರನ್ನೇ ಹೆಚ್ಚಾಗಿ ಕಾಣಬಹುದು.

**ಗಣಿಕ್ಷೇತ್ರವು ಮಹಿಳೆಯರಿಗೆ ಈಗ ಯಾವ ಬಗೆಯ ಉದ್ಯೋಗವನ್ನು, ನೀಡುತ್ತಿದೆ?**

- ಭಾರತದಲ್ಲಿ ಗಣಿಕ್ಷೇತ್ರದಲ್ಲಿನ ಸಂಪೂರ್ಣ ಕಾರ್ಮಿಕ ಬಲದಲ್ಲಿ ಶೇ. ೪ ರಷ್ಟು ಮಹಿಳೆಯರಿದ್ದಾರೆ.

- ಮಹಿಳೆಯರು ಸಾಮಾನ್ಯವಾಗಿ ಗಣಿಯನ್ನು ಪ್ರವೇಶಿಸುವುದು ಬಾಲಕಾರ್ಮಿಕರಾಗಿ. ಬಡತನ, ತೀರಿಸಲಾಗದ ಸಾಲ, ಕುಟುಂಬದಲ್ಲಿ ಸಾವು, ಕೃಷಿ ಕ್ಷೇತ್ರದಲ್ಲಿ ಉದ್ಯೋಗದ ಕೊರತೆ, ಅಥವಾ ಸಾಂಪ್ರದಾಯಿಕ ಒತ್ತಡವೂ ಕಾರಣವಾಗಿರಬಹುದಾಗಿದೆ.

- ಕೆಲವು ಜನಾಂಗಗಳಲ್ಲಿ ಗಣಿಗಾರಿಕೆಯು ಸಾಂಪ್ರದಾಯಿಕ ವೃತ್ತಿಯಾಗಿದ್ದು ಇಂತಹ ಕಡೆ ಮಹಿಳೆಯರು ಕುಟುಂಬಗಳ ಗುಂಪಿನ ಜೊತೆ ಅಥವಾ ಮಹಿಳೆಯರು ಹಾಗೂ ಮಕ್ಕಳ ಗುಂಪಿನ ಜೊತೆ ಸೇರಿ ಕೆಲಸ ಮಾಡುತ್ತಾರೆ.

- ಮಹಿಳಾ ಕಾರ್ಮಿಕರು ಹೆಚ್ಚಾಗಿ ಅಸಂಘಟಿತ ವಲಯದಲ್ಲೋ / ಅನೌಪಚಾರಿಕ ವಲಯದಲ್ಲೋ / ಕಾನೂನು ಬಾಹಿರ ಗಣಿ ಚಟುವಟಿಕೆಗಳಲ್ಲೋ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

- ಕೇವಲ ಶೇಕಡ ೧ರಷ್ಟು ಗಣಿಕ್ಷೇತ್ರದ ಮಹಿಳಾ ಕಾರ್ಮಿಕರು ಶಾಶ್ವತವಾದ / ಔಪಚಾರಿಕ ಉದ್ಯೋಗದಲ್ಲಿ ಗಣಿ ಕಂಪನಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

- ಖಾಸಗೀಕರಣ ಹಾಗೂ ಯಾಂತ್ರೀಕರಣದಿಂದಾಗಿ ಮಹಿಳಾ ಕಾರ್ಮಿಕರು ಗಣಿಗಳಲ್ಲಿ ದಿನಗೂಲಿಗಳಾಗಿ / ಗುತ್ತಿಗೆ / ಹಂಗಾಮಿ ದಿನಗೂಲಿ ಕೆಲಸಗಾರರಾಗಿ ದುಡಿಯುತ್ತಾರೆ.

- ಗಣಿಗಳಲ್ಲಿ ಇಂದು ಮಹಿಳೆಯರು ಹೆಚ್ಚಿನ ಸಂಖ್ಯೆಯವರು ವಲಸೆಗಾರ ಕಾರ್ಮಿಕರಾಗಿದ್ದಾರೆ.

- ಅನಕ್ಷರತೆ ಹಾಗೂ ತಾಂತ್ರಿಕ ಕೌಶಲ್ಯದ ಕೊರತೆಯಿಂದಾಗಿ ಗಣಿಗಳಲ್ಲಿ ಮಹಿಳೆಯರು ಚಾಕರಿಯ ಥರದ ಆದರೂ ಅಪಾಯದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

- ಮಹಿಳೆಯರು ಸಾಮಾನ್ಯವಾಗಿ ಕಲ್ಲು ಗಣಿಗಳಲ್ಲಿ, ಸಣ್ಣ ಪ್ರಮಾಣದ ಗಣಿಗಳಲ್ಲಿ, ಕಾರೆಗಾರ ಗಣಿಗಳಲ್ಲಿ (artisanal) ಅಥವಾ ಕಲ್ಲಿದ್ದಲು, ಕಬ್ಬಿಣದ ಅದಿರು, ಕ್ರೋಮೈಟ್, ಮ್ಯಾಂಗನೀಸ್ ಮೊದಲಾದ ದೊಡ್ಡ ಗಣಿಗಳಲ್ಲಿ ಗುತ್ತಿಗೆ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ.

- ಮಹಿಳೆಯರು ಅತ್ಯಂತ ಕೆಳ ಮಟ್ಟದ ಕೆಲಸಗಳಾದ ಸ್ವಚ್ಛತೆ, ಕಲ್ಲು ಒಡೆಯುವುದು, ಜರಡಿ ಹಿಡಿಯುವುದು, ಸೋಸುವುದು, ಭಾರ ಹೊರುವುದು, ಸಂಸ್ಕರಣೆ, ಆಯ್ದು ತೆಗೆಯುವುದು ಹಾಗೂ ಇನ್ನಿತರ ಕನಿಷ್ಠ ಮಟ್ಟದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

- ಎಷ್ಟೋ ಸಲ ಮಹಿಳೆಯರಿಗೆ ತಾವು ಯಾರ ಬಳಿ ಕೆಲಸ ಮಾಡುತ್ತೇವೆ, ತಮ್ಮ ಮೇಲಿನವರು ಯಾರು ಎನ್ನುವುದು ಕೂಡ ತಿಳಿದಿರುವುದಿಲ್ಲ.

- ಗಣಿ ಕಾಯಿದೆ ೧೯೫೨ರ ಪ್ರಕಾರ ಮಹಿಳೆಯರು ಗಣಿಯ ಒಳಗೆ ಕೆಲಸ ಮಾಡುವುದನ್ನು ನಿಷೇಧಿಸಲಾಗಿದೆ.

- ಕೆಲವು ಗಣಿಗಳಲ್ಲಿ ಮಹಿಳೆಯರು ರಾತ್ರಿ ಪಾಳಿಗಳಲ್ಲೂ ಕೆಲಸ ಮಾಡಲು ಅನುಮತಿ ನೀಡಲಾಗುತ್ತದೆ.

**ಮಹಿಳಾ ಗಣಿ ಕಾರ್ಮಿಕರ ವೇತನದ ಸ್ಥಿತಿ ಹೇಗಿದೆ?**

- ಎಷ್ಟೋ ಸಲ ಮಹಿಳಾ ಗಣಿ ಕಾರ್ಮಿಕರು ಗಣಿ ಕಂಪನಿಗಳ ಕಾರ್ಮಿಕರ ಪಟ್ಟಿಯಲ್ಲಿ ಇರುವುದೇ ಇಲ್ಲ.

- ಬಹುತೇಕ ಮಹಿಳಾ ಗಣಿಕಾರ್ಮಿಕರು, ೧೯೪೮ರ ಕನಿಷ್ಠ ಕೂಲಿ ಕಾಯಿದೆಯ ಪ್ರಕಾರ ಸಂಬಳವನ್ನು ಪಡೆಯುವುದಿಲ್ಲ.

- ಕೆಲಸಕ್ಕೆ ಹಾಜರಾಗುವಲ್ಲಿ ಸ್ವಲ್ಪ ವಿಳಂಬವಾದರೂ ಸಂಬಳದಲ್ಲಿ ಒಂದಷ್ಟು ಮೊತ್ತವನ್ನು ಕತ್ತರಿಸುವುದು ಹಾಗೂ ದೀರ್ಘಕಾಲ ಕೆಲಸ ಮಾಡಿಸುವುದು.

- ಪುರುಷರೇ ಮಾಡುವ ಕೆಲಸವನ್ನು ಮಹಿಳೆಯರು ಮಾಡಿದರೂ ಸಹ ಪುರುಷರಿಗಿಂತ ಮಹಿಳೆಯರಿಗೆ ಕಡಿಮೆ ಸಂಬಳ ನೀಡುವುದು.

- ಗುತ್ತಿಗೆದಾರನು ಗುತ್ತಿಗೆ ತೆಗೆದುಕೊಂಡ ಗುಂಪಿಗೆ ಹಣ ನೀಡುತ್ತಾನೆ. ಗುಂಪು ಅದನ್ನು ಹಂಚಿಕೊಳ್ಳಬೇಕಾಗುತ್ತದೆ. ಇದೊಂದು ವಿಧಾನವಾದರೆ ದಿನಗೂಲಿ ಆಧಾರದ ಮೇಲೆ ವಾರದ/ತಿಂಗಳಿನ ಕೊನೆಗೆ ಸಂಬಳ ನೀಡುವುದು ಇನ್ನೊಂದು ವಿಧಾನವಾಗಿದೆ.

- ಮಹಿಳಾ ಕಾರ್ಮಿಕರಿಗೆ ಅವರು ಕೆಲಸ ಮಾಡಿದ ದಿನಗಳ ಲೆಕ್ಕದ ಆಧಾರದ ಮೇಲೆ ಸಂಬಳ ಸಿಗುತ್ತದೆ.

- ವಾರಕ್ಕೊಮ್ಮೆಯಾಗಲಿ, ತಿಂಗಳಲ್ಲಿ ಒಂದು ದಿನವಾಗಲಿ ಅವರಿಗೆ ರಜೆ ಇರುವುದಿಲ್ಲ.

- ಹೆರಿಗೆ ಭತ್ಯೆಯನ್ನಾಗಲಿ, ರಜೆಯನ್ನಾಗಲಿ ಅವರಿಗೆ ನೀಡಲಾಗುವುದಿಲ್ಲ.

- ಅಲ್ಲಿ ಕೆಲಸದ ಭದ್ರತೆಯಾಗಲಿ, ಗುಣಮಟ್ಟದ ಸಂಬಳವಾಗಲಿ ಇರುವುದಿಲ್ಲ. ಗಣಿಯಲ್ಲಿ ಲಾಭ ಬರದಿದ್ದರೆ ಮಾಲಿಕರು ಮೊದಲು ಮಹಿಳಾ ಕಾರ್ಮಿಕರನ್ನೇ ಕೆಲಸದಿಂದ ಹೊರಗೆ ಕಳುಹಿಸುತ್ತಾರೆ.

**ಮಹಿಳಾ ಗಣಿಕಾರ್ಮಿಕರ ಕೆಲಸದ ಸ್ಥಿತಿ ಏನು?**

- ಮಹಿಳಾ ಕಾರ್ಮಿಕರು ಬರಿಗೈಯಲ್ಲಿ, ಬರಿಗಾಲಿನಲ್ಲಿ ಯಾವುದೇ ರಕ್ಷಣಾತ್ಮಕ ಉಡುಪುಗಳಾಗಲಿ, ಪರಿಕರಗಳನ್ನಾಗಲಿ ಉಪಯೋಗಿಸದೆ ಅಪಾಯಕರ ಸನ್ನಿವೇಶದಲ್ಲಿ ಕೆಲಸ ಮಾಡುತ್ತಾರೆ.

- ಮಹಿಳಾ ಕಾರ್ಮಿಕರಲ್ಲಿ ವಿಶೇಷವಾಗಿ ಹದಿಹರೆಯದ ಹೆಣ್ಣುಮಕ್ಕಳು ಪುರುಷ ಕಾರ್ಮಿಕರ ಹಾಗೂ ಗುತ್ತಿಗೆದಾರರು ನೀಡುವ ದೈಹಿಕ, ಶಾಬ್ದಿಕ ಹಾಗೂ ಲೈಂಗಿಕ ಕಿರುಕುಳಗಳನ್ನು ಎದುರಿಸಬೇಕಾಗುತ್ತದೆ.

- ಭಾರತದ ಗಣಿ ಪ್ರದೇಶಗಳಲ್ಲಿ ಶೌಚಾಲಯವಾಗಲಿ, ಕೈತೊಳೆಯುವ ಸ್ಥಳಗಳಾಗಲಿ, ಕುಡಿಯುವ ನೀರಿನ ಸೌಕರ್ಯವಾಗಲಿ ಅಥವಾ ಮಹಿಳಾ ಕಾರ್ಮಿಕರಿಗೆ ಪ್ರತ್ಯೇಕ ಕೊಠಡಿಯಾಗಲಿ ಇರುವುದೇ ಇಲ್ಲ.

- ಅವರ ಮಕ್ಕಳಿಗೆ ಶಿಶುವಿಹಾರಗಳೂ ಇರುವುದಿಲ್ಲ.

- ಆಗಾಗ್ಗೆ ಅಪಘಾತಗಳೂ, ಸಣ್ಣಪುಟ್ಟ ಗಾಯಗಳೂ ಆಗುತ್ತಲೇ ಇರುತ್ತವೆ. ಆದರೂ ಸಹ ವೈದ್ಯಕೀಯ ನೆರವುಗಳಾಗಲಿ, ಪರಿಹಾರವಾಗಲಿ ಅವರಿಗೆ ದೊರೆಯುವುದಿಲ್ಲ.

- ಎಷ್ಟೋ ಸಲ ಮಹಿಳಾ ಕಾರ್ಮಿಕರನ್ನು ಗಣಿ ಹೊಂಡದೊಳಗೆ ಹಗ್ಗದ ಮೂಲಕ ಅಥವಾ ಯಾವುದೇ ಆಧಾರವಿಲ್ಲದೆ ಜಿಗಿಸಿ ಅಲ್ಲಿ ೮–೧೦ ತಾಸು ಕೆಲಸ ಮಾಡಿಸಲಾಗುತ್ತದೆ. ಅಲ್ಲಿ ಕನಿಷ್ಠ ಶೌಚಾಲಯದ ವ್ಯವಸ್ಥೆಯೂ ಇರುವುದಿಲ್ಲ.

- ಗಣಿ ಪ್ರದೇಶದಲ್ಲಿ ಮಹಿಳಾ ಹಕ್ಕುಗಳನ್ನು ಪ್ರತಿನಿಧಿಸುತ್ತೇವೆಂದು ಹೇಳಿಕೊಳ್ಳುವ ಕಾರ್ಮಿಕ ಸಂಘಟನೆಗಳೇ ಇಲ್ಲವೆನ್ನಬಹುದು.

**ಮಹಿಳಾ ಗಣಿ ಕಾರ್ಮಿಕರು ಎದುರಿಸುವಂತಹ ಆರೋಗ್ಯದ ಸಮಸ್ಯೆಗಳು ಹಾಗೂ ಅಪಾಯಗಳು ಯಾವ ಬಗೆಯದಾಗಿರುತ್ತದೆ ?**

- ಮಹಿಳೆಯರು ನಿರಂತರವಾಗಿ ಗಣಿ ಧೂಳು ಹಾಗೂ ಶಬ್ದ ಮಾಲಿನ್ಯಕ್ಕೆ ತುತ್ತಾಗುತ್ತಾರೆ. ಗಾಯಗಳು ಮತ್ತು ಅಪಘಾತಕ್ಕೆ ತುತ್ತಾಗುತ್ತಾರೆ. ಹಾಗೂ ಸರಿಯಾದ ಕೊಠಡಿಯು ಇಲ್ಲದೆ ತಮ್ಮ ಮಕ್ಕಳನ್ನು, ಶಿಶುಗಳನ್ನು ಈ ಅಪಾಯಕರ ಸನ್ನಿವೇಶದಲ್ಲೇ ಇಟ್ಟುಕೊಂಡು ಕೆಲಸ ಮಾಡುತ್ತಾರೆ.

- ಕ್ಷಯರೋಗ, ಶ್ವಾಸಕೋಶದ ತೊಂದರೆ, ಸಿಲಿಕೋಸಿಸ್, ಚರ್ಮದ ಸೋಂಕು, ಸಂತಾನೋತ್ಪಾದನೆಗೆ ಸಂಬಂಧಿತ ಆರೋಗ್ಯದ ಸಮಸ್ಯೆಗಳು, ದೀರ್ಘಕಾಲ ದೇಹದಲ್ಲಿ ನೋವು, ಜ್ವರ, ಬೇಧಿ, ಮಲೇರಿಯಾ, ಕಾಮಾಲೆ ಹಾಗೂ ಇನ್ನುಳಿದ ದೀರ್ಘಾವಧಿ ಕಾಯಿಲೆಗಳು ಸಾಮಾನ್ಯವಾಗಿ ಕಾಡುತ್ತದೆ.

- ಮಹಿಳೆಯರು ಅತಿಯಾದ ಒತ್ತಡ, ಮನೋವ್ಯಾಧಿ, ಖಿನ್ನತೆಗಳಿಗೆ ತುತ್ತಾಗಿ ಒಟ್ಟಾರೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

- ಇದು ಸಾಲದೆಂಬಂತೆ ಕುಡುಕ ಗಂಡನಿಂದ ಹೊಡೆತ ಹಿಂಸೆಗಳಿಂದ ಅವರು ಜರ್ಜರಿತರಾಗುತ್ತಾರೆ. ಹೆಚ್ಚಿನ ಕೆಲಸದ ಭಾರವನ್ನು ಸಹಿಸಿಕೊಳ್ಳಲು ಮದ್ಯ ಹಾಗೂ ಗುಟಕಾಗಳಂತಹ ಮಾದಕವನ್ನು ಬಳಸುವುದರಿಂದ ಅವರ ಆರೋಗ್ಯ ಇನ್ನಷ್ಟು ಕುಂದುತ್ತದೆ.

- ಋಣ ಹಾಗೂ ಸಾಲಗಳು ಗಣಿ ಕಾರ್ಮಿಕರ ಬಹು

ಮುಖ್ಯ ಸಮಸ್ಯೆಯಾಗಿದ್ದು, ಇದು ಮಹಿಳಾ ಕಾರ್ಮಿಕರು, ಅಥವಾ ಅವರ ಗಂಡಸರು ಸದಾ ಕಾಯಿಲೆಯಲ್ಲೇ ಇರುವಂತೆ ಮಾಡುತ್ತದೆ.

- ಕನಿಷ್ಠ ವೇತನ ಹಾಗೂ ಸುಸ್ಥಿರ ವೇತನ ಇರದ ಕಾರಣದಿಂದಾಗಿ ಅವರಿಗೆ ವೈದ್ಯಕೀಯ ನೆರವು ಪಡೆಯುವುದು ಕಷ್ಟವಾಗುತ್ತದೆ. ಹೀಗಾಗಿ ಮನೆಮದ್ದು ಅಥವಾ ಅಳಲೆಕಾಯಿ ಪಂಡಿತರ ಮೊರೆ ಹೋಗುತ್ತಾರೆ. ಹಾಗಾಗಿ ಗುಣವಾಗುವ ಸಾಧ್ಯತೆ ಕ್ಷೀಣಿಸುತ್ತದೆ.

- ಮಹಿಳಾ ಕಾರ್ಮಿಕರು ಲೈಂಗಿಕ ಶೋಷಣೆಗೂ ತುತ್ತಾಗುತ್ತಾರೆ. ಹೀಗಾಗಿ ಹೆಚ್.ಐ.ವಿ / ಏಡ್ಸ್‌ಗಳು ಮತ್ತು ಲೈಂಗಿಕ ರೋಗಗಳು ಗಣಿ ಕೆಲಸ ಮಾಡುವ ಕ್ಷೇತ್ರಗಳಲ್ಲಿ ಹಾಗೂ ಕಾರ್ಮಿಕರ ಮನೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಇಂತಹ ಕಡೆ ವಲಸೆ ಹೋಗುವ ಜನಸಂಖ್ಯೆ, ಲಾರಿಗಳ ಅತಿ ಸಂಚಾರ, ಗಣಿಗಳ ಸುತ್ತ ಹೊರಗಿನವರು ತಾತ್ಕಾಲಿಕವಾಗಿ ಬೀಡು ಬಿಡುವುದು ಇವುಗಳಿಂದಾಗಿಯೂ ಎಚ್.ಐ.ವಿ / ಏಡ್ಸ್ ಹಾಗೂ ಲೈಂಗಿಕ ರೋಗಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ.

**ಮಹಿಳಾ ಗಣಿ ಕಾರ್ಮಿಕರ ಜೀವನಾಧಾರ ಸ್ಥಿತಿಗತಿಗಳೇನು?**

- ಗಣಿ ಕಾರ್ಮಿಕರ ಮನೆಗಳಲ್ಲಿ ಬಹುತೇಕ ಮನೆಗಳು ಕಚ್ಚಾ ಆಗಿದ್ದು ಪಕ್ಕಾ ಮನೆಗಳೇ ಅಪರೂಪ. ಅವರು ಗಣಿ ಪ್ರದೇಶಕ್ಕೆ ಹತ್ತಿರದಲ್ಲೇ ವಸತಿ ಸಮುಚ್ಚಯಗಳಲ್ಲಿ ವಾಸಿಸುತ್ತಾರೆ. ಅವುಗಳು ತಾತ್ಕಾಲಿಕ ಶೆಡ್‌ಗಳಾಗಿದ್ದು ಉತ್ತಮ ವಸತಿ ಸೌಕರ್ಯದ ಕೊರತೆಯಿಂದ ಬಳಲುತ್ತಾರೆ.

- ಕುಡಿಯುವ ನೀರಿನದೇ ಅಲ್ಲಿ ಬಹುದೊಡ್ಡ ಸಮಸ್ಯೆ. ಸಾಕಷ್ಟು ನೀರು ಸಿಗದ ಕಾರಣದಿಂದಾಗಿ ಮಹಿಳೆಯರು ನೀರಿಗಾಗಿ ತುಂಬಾ ದೂರ ನಡೆಯಬೇಕಾಗುತ್ತದೆ. ಹಾಗೆ ಸಿಗುವ ನೀರು ಕೂಡ ಗಣಿ ಧೂಳು ಹಾಗೂ ವಿಷದ ಕಣಗಳಿಂದಾಗಿ ಮಲಿನವಾಗಿರುವ ಕಾರಣ ನಿರಂತರ ಆರೋಗ್ಯ ಸಮಸ್ಯೆ ಹಾಗೂ ದೈಹಿಕ ತೊಂದರೆಗೆ ಮಹಿಳೆಯರು ತುತ್ತಾಗುವುದು ಸ್ಪಷ್ಟ ಗೋಚರ ಸತ್ಯ.

- ಬಹಳಷ್ಟು ಗಣಿ ಕಾರ್ಮಿಕರಿಗೆ ಸಾರ್ವಜನಿಕ ಹಂಚಿಕೆ ವ್ಯವಸ್ಥೆಯೇ ದೊರಕುವುದಿಲ್ಲ. ಗುಳೆ ಕಾರ್ಮಿಕರಾದ ಇವರಿಗೆ ಒಂದು ನಿರ್ದಿಷ್ಟ ಮನೆ, ವಿಳಾಸ ಇರದ ಕಾರಣ ಪಡಿತರ ಚೀಟಿಯ ಲಭ್ಯತೆ ಕಷ್ಟ ಸಾಧ್ಯ.

- ಶಾಲೆಗಳು ಕಾರ್ಮಿಕರ ವಸತಿ ಗೃಹ ಸಮುಚ್ಚಯಗಳಿಂದ ದೂರ ಇರುವುದರಿಂದಾಗಿ ಕಾರ್ಮಿಕರ ಮಕ್ಕಳಿಗೆ ಶಾಲೆಗೆ ಕ್ರಮಬದ್ಧವಾಗಿ ಹಾಜರಾಗಲು ಸಾಧ್ಯವಾಗುವುದಿಲ್ಲ. ಅಥವಾ ಬಾಲಕಾರ್ಮಿಕರಾಗಿ ತಮ್ಮ ದುಡಿಮೆಯನ್ನು ಆರಂಭಿಸಿ ಶಾಲೆಯ ಜೀವನಕ್ಕೆ ಅಂತ್ಯ ಹಾಡಬೇಕಾಗುವುದು ದುಃಖಕರ ಸಂಗತಿ.

- ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಮಿಕ ವಸತಿ ಸಮುಚ್ಚಯಗಳಿಂದ ದೂರವಿರುವ ಕಾರಣ, ತುರ್ತುಸ್ಥಿತಿಯಲ್ಲಿ ಅಥವಾ ಅನಾರೋಗ್ಯದ ವೇಳೆಗೆ, ಅದರ ಸೌಲಭ್ಯ ಪಡೆಯುವುದು ದುಸ್ತರವಾಗುತ್ತದೆ.

**ಮಹಿಳಾ ಗಣಿ ಕಾರ್ಮಿಕರ ಹಾಗೂ ಗಣಿ ಕಾರ್ಮಿಕರ ಪತ್ನಿಯರ ಹಕ್ಕುಗಳ ಸಂರಕ್ಷಣೆ**

**ಈಗ ಇರುವ ಹಕ್ಕುಗಳು ಹಾಗೂ ಕಾನೂನು ಭದ್ರತೆ :**

**ಕಾನೂನು ಏನನ್ನುತ್ತದೆ ?**

**ಗಣಿ ಕಾಯಿದೆ ೧೯೫೨**

ಭಾರತದಲ್ಲಿ ಗಣಿ ಕಾರ್ಮಿಕರ ಕೆಲಸ, ಆರೋಗ್ಯ ಹಾಗೂ ಸುರಕ್ಷತೆಯ ಕುರಿತಾಗಿ ನಿಯಮಗಳನ್ನು ಹಾಕಿರುವದು ೧೯೫೨ ರ ಗಣಿ ಕಾಯಿದೆ. ಕಾರ್ಮಿಕರ ಮಂತ್ರಾಲಯದಡಿಯಲ್ಲಿ ಇದು ಬರುತ್ತದೆ.

ಗಣಿ ಕಾರ್ಮಿಕರೆಂದರೆ ಯಾರು?

ಕಾಯಿದೆಯ ಮೊದಲನೇ ಅಧ್ಯಾಯದಲ್ಲಿ ವಿವರಿಸಿರುವಂತೆ ಯಾವುದೇ ವ್ಯಕ್ತಿ ಗಣಿಯಲ್ಲಿ ಕೆಲಸ ಮಾಡುತ್ತಿದ್ದರೆ ಅವರು ಗಣಿ ಕಾರ್ಮಿಕರ್ನಿಸಿಕೊಳ್ಳುತ್ತಾರೆ.

೧. ಗಣಿಗಳಿಗೆ ಸಂಬಂಧಿಸಿದ ಯಾವುದೇ– ಮರಳನ್ನು ಅಗೆದು ತುಂಬುವುದರಿಂದ ಹಿಡಿಸು ಅದನ್ನು ಎಲ್ಲಿಂದ ಮುಂದೆ ಸಾಗಿಸುತ್ತಾರೋ ಆ ಜಾಗದ ವರೆಗೆ ಸಾಗಾಣಿಕೆಯ ಯಾವುದೇ–ಕೆಲಸದಲ್ಲೂ ಭಾಗಿಯಾದ ವ್ಯಕ್ತಿ ಗಣಿ ಕಾರ್ಮಿಕರೆನಿಸುತ್ತಾರೆ.

೨. ಗಣಿಯಲ್ಲಿ ಬಳಸುವ ಯಾವುದೇ ಯಂತ್ರದ ಭಾಗಗಳ ರಿಪೇರಿ, ಮರುಜೋಡಣೆ, ಅದರ ನಿರ್ವಹಣೆ ಮತ್ತು

ಮೇಲ್ವಿಚಾರಣೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡುವವರು.

೩. ಗಣಿ ಪ್ರದೇಶದಲ್ಲಿ ವಸ್ತುಗಳನ್ನು ಎತ್ತಿ ಹೊರಿಸಿಕೊಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕೆಲಸ ಮಾಡುವವರು

೪. ಗಣಿ ಪ್ರದೇಶದಲ್ಲಿ ಯಾವುದೇ ಕಚೇರಿಯಲ್ಲಿ ಕೆಲಸ ಮಾಡುವವರು.

೫. ಗಣಿಗಾರಿಕೆಗೆ ಸಂಬಂಧಿಸಿದ ಯಾವುದೇ ಪೂರ್ವ ತಯಾರಿಯ ಕೆಲಸ ಮಾಡುವವರು

ಭಾರತದಲ್ಲಿ ಬೇರೆ ಬೇರೆ ಗಣಿಗಳು ಹಾಗೂ ಕಲ್ಲು ಗಣಿಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು, 1952ರ ಗಣಿ ಕಾಯಿದೆಯ ಅಡಿಯಲ್ಲಿ, ಎಲ್ಲ ಗಣಿ ಕಾರ್ಮಿಕರಿಗೆ ನೀಡಿದ ಹಕ್ಕುಗಳನ್ನೇ ಪಡೆಯಬಹುದಾಗಿದೆ.

ಹಕ್ಕುಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ :

**ಕುಡಿಯುವ ನೀರಿನ ಕುರಿತಾಗಿ :**

- ಪ್ರತಿಯೊಂದೂ ಗಣಿಯಲ್ಲಿ ಎಲ್ಲ ಕಾರ್ಮಿಕರಿಗೂ ಕುಡಿಯುವ ನೀರನ್ನು ಬೇಕಾದಷ್ಟು ಪ್ರಮಾಣದಲ್ಲಿ ಅನುಕೂಲವಾದ ಸ್ಥಳದಲ್ಲಿ ಒದಗಿಸಬೇಕು ಹಾಗೂ ಕುಡಿಯುವ ನೀರಿನ ಉತ್ತಮ ನಿರ್ವಹಣೆ ಇರಬೇಕು.
- ಕುಡಿಯುವ ನೀರಿರುವ ಎಲ್ಲ ಸ್ಥಳದಲ್ಲೂ ಬಹುತೇಕ ಕಾರ್ಮಿಕರಿಗೆ ಅರ್ಥವಾಗುವ ಭಾಷೆಯಲ್ಲಿ 'ಕುಡಿಯುವ ನೀರು' ಎಂದು ಫಲಕ ತಗುಲಿಸಿರಬೇಕು. ಕೈತೊಳೆಯುವ ಸ್ಥಳ, ಶೌಚಾಲಯ ಮೊದಲಾದವುಗಳಿಂದ, ಮುಖ್ಯ ತಪಾಸಣಾ ಅಧಿಕಾರಿಯು ಕಡಿಮೆ ಅಂತರಕ್ಕೆ ಲಿಖಿತ ರೂಪದಲ್ಲಿ ಅನುಮತಿ ನೀಡಿದ್ದರ ಹೊರತಾಗಿ, ೬ ಮೀಟರ್‌ಗಿಂತ ಒಳಗಡೆ ಕುಡಿಯುವ ನೀರಿನ ಸ್ಥಳವನ್ನು ಇಡಬಾರದು.
- ಕುಡಿಯುವ ನೀರನ್ನು ಉಚಿತವಾಗಿ ನೀಡಬೇಕು.

**ಶೌಚಾಲಯದ ಕುರಿತಾಗಿ :**

- ಪ್ರತಿಯೊಂದು ಗಣಿ ಪ್ರದೇಶದಲ್ಲೂ ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯವನ್ನು ಕಟ್ಟಬೇಕು.
- ಶೌಚಾಲಯಗಳು ಸಾಕಷ್ಟು ಸಂಖ್ಯೆಯಲ್ಲಿ ಇರಬೇಕು. ಅವು ಅನುಕೂಲಕರ ಸ್ಥಳದಲ್ಲಿ ಇರಬೇಕು. ಹಾಗೂ ಎಲ್ಲ ವೇಳೆಯಲ್ಲೂ ಪ್ರತಿಯೊಬ್ಬ ಗಣಿ ಕಾರ್ಮಿಕರಿಗೂ ದೊರಕುವಂತೆ ನಿರ್ಮಿಸಬೇಕು.
- ಎಲ್ಲ ಶೌಚಾಲಯ ಹಾಗೂ ಮೂತ್ರಾಲಯಗಳಲ್ಲೂ ಸಾಕಷ್ಟು ಗಾಳಿ, ಬೆಳಕು ದೊರಕುವಂತಿರಬೇಕು. ಸದಾ ಕಾಲ ಸ್ವಚ್ಛವಾಗಿರಬೇಕು.

**ವೈದ್ಯಕೀಯ ಉಪಕರಣ ಹಾಗೂ ನೆರವುಗಳ ಕುರಿತಾಗಿ :**

- ಪ್ರತಿಯೊಂದು ಗಣಿಯಲ್ಲೂ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹಾಗೂ ನಿರ್ದಿಷ್ಟ ಔಷಧಿಗಳನ್ನು ಹೊಂದಿದ ಕಪಾಟನ್ನು ಒದಗಿಸಬೇಕು. ಅದನ್ನು ಒಬ್ಬರು ನಿರ್ವಹಿಸುತ್ತಿರಬೇಕು. ಅಂತಹ ಔಷಧಗಳು ಗಣಿಯ ಕೆಲಸದ ವೇಳೆಯಲ್ಲಿ ಯಾವಾಗಲೂ ಸುಲಭವಾಗಿ ದೊರಕುವಂತಿರಬೇಕು.
- ಈ ಅಲಮಾರು ಮತ್ತು ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ನಿರ್ಧಿಷ್ಟವಾದ ಔಷಧಗಳೇ ಇರಬೇಕು. ಮತ್ತೇನೂ ಇರಕೂಡದು.
- ಪ್ರತಿಯೊಂದು ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಥವಾ ಅಲಮಾರು, ಯಾವ ವ್ಯಕ್ತಿ ಪ್ರಥಮ ಚಿಕಿತ್ಸಾ ವಿಧಾನದಲ್ಲಿ ತರಬೇತಿ ಪಡೆದಿರುವನೋ ಹಾಗೂ ಅಂತಹ ವ್ಯಕ್ತಿಯು ಗಣಿಯ ಕೆಲಸದ ವೇಳೆಗೆ ಸುಲಭವಾಗಿ ದೊರಕುವಂತಿರುವನೋ ಆ ವ್ಯಕ್ತಿಯೇ ಇವುಗಳನ್ನು ನಿರ್ವಹಿಸಬೇಕು.
- ಪ್ರತಿಯೊಂದು ಗಣಿ ಪ್ರದೇಶದಲ್ಲೂ ಆಸ್ಪತ್ರೆಗೆ ಅಥವಾ ದವಾಖಾನೆಗೆ ಒಯ್ಯಲು ಸುಲಭವಾಗುವಂತೆ ವಾಹನಗಳ ವ್ಯವಸ್ಥೆ ಇರಬೇಕು. ಆಗ ಯಾವುದೇ ವ್ಯಕ್ತಿ ಗಣಿಗಳಲ್ಲಿ ಕೆಲಸ ಮಾಡುವಾಗ ಕಾಯಿಲೆ ಬಿದ್ದರೆ ಅಥವಾ ದೇಹಕ್ಕೆ ಗಾಯವಾದರೆ ಕೂಡಲೇ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ.
- ಪ್ರತಿಯೊಂದು ಗಣಿಯಲ್ಲೂ ೧೫೦ಕ್ಕಿಂತ ಹೆಚ್ಚು ಕಾರ್ಮಿಕರು ಇದ್ದ ಕಡೆ, ಉತ್ತಮ ಸ್ಥಿತಿಯಲ್ಲಿ ಇರುವ, ಉಪಕರಣಗಳನ್ನು ಹೊಂದಿದ ಪ್ರಥಮ ಚಿಕಿತ್ಸಾ ಕೊಠಡಿಯನ್ನು ಒದಗಿಸಬೇಕು. ಇಂತಹ ಕೊಠಡಿಗಳು ವೈದ್ಯಕೀಯ ಹಾಗೂ ನರ್ಸ್ ಸಿಬ್ಬಂದಿಗಳ ಸುಪರ್ದಿಯಲ್ಲಿರಬೇಕು.

- ಎಲ್ಲಿ ೧೦೦೦ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಾರೋ ಅಲ್ಲಿ ಆರ್.ಎಂ.ಪಿ.ಗಳು (ಅಲ್ಲಿಯೇ ವಾಸಮಾಡುವಂಥ ವೈದ್ಯರು) ಗಣಿ ಕೆಲಸದ ವೇಳೆಗೆ ಸುಲಭವಾಗಿ ದೊರಕುವಂತಿರಬೇಕು.

**ಅಪಘಾತವು ಗಮನಕ್ಕೆ ಬಂದಾಗ :**

ಗಣಿಗಳಲ್ಲಿ ಅಪಘಾತವು ಈ ಕೆಳಗಿನವುಗಳನ್ನು ಒಳಗೊಂಡಿದೆ:

- ಜೀವ ನಷ್ಟಕ್ಕೆ ಕಾರಣವಾಗಿರುವಂತಹ ಅಪಘಾತ ಅಥವಾ ಗಾಯ.
- ಸ್ಫೋಟ, ತೀವ್ರ ಶಾಖ ಅಥವಾ ಬೆಂಕಿ.
- ನೀರು ಅಥವಾ ದ್ರವ ವಸ್ತು ಒಳನುಗ್ಗುವುದು.
- ವಿಷಪೂರಿತ ಅನಿಲದ ಒಳನುಗ್ಗುವಿಕೆ.
- ಹಗ್ಗದ ಸರಪಳಿ ಅಥವಾ ಯಾವುದಾದರೂ ಉಪಕರಣಗಳು ಒಡೆಯುವುದರಿಂದ ಯಾವುದೇ ವ್ಯಕ್ತಿ ಅಥವಾ ಸಲಕರಣೆಗೆ ನಷ್ಟವುಂಟಾಗುವುದು.
- ರವಾನೆ ಗಾಡಿಗಳಲ್ಲಿರುವ ಬಂಡಿಗಳು ಸವೆದಿದ್ದರ ಪರಿಣಾಮ.
- ಕೆಲಸ ಮಾಡುವ ಸಾಧನಗಳ ಯಾವುದೇ ಬಿಡಿ ಭಾಗಗಳ ಬೀಳುವಿಕೆ

ಇವುಗಳನ್ನು ಅಪಘಾತದ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ.

ಈ ಮೇಲಿನ ಪ್ರಕರಣಗಳು ಸಂಭವಿಸಿದಾಗ ಅಪಘಾತವಾದ ನಂತರ ಒಂದು ನಿರ್ದಿಷ್ಟ ಅವಧಿಯೊಳಗೆ ಮಾಲೀಕರು, ಕಾರ್ಯಸ್ಥರು ಅಥವಾ ಕಾರ್ಯ ನಿರ್ವಾಹಕರು ಆಡಳಿತಮಂಡಳಿಗೆ ಮಾಹಿತಿಯನ್ನು ರವಾನಿಸಬೇಕು ಹಾಗೂ ಕಾರ್ಮಿಕ ಸಂಘದ ಕಛೇರಿ ವರ್ಗವು ತಪಾಸಣೆ ಮಾಡಬಹುದಾದ ಸ್ಥಳದಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ವಿಶೇಷ ಸೂಚನಾ ಫಲಕದ ಮೇಲೆ ಬಳಸಲು ಸೂಚನೆಯ ಒಂದು ಪ್ರತಿಯನ್ನು ರವಾನಿಸಬೇಕು ಹಾಗೂ ಹಾಗೆ ರವಾನಿಸಿದ ದಿನಾಂಕದಿಂದ ೧೪ ದಿನಗಳೊಳಗಾಗಿ ಸೂಚನೆಯು ಸೂಚನಾ ಫಲಕದ ಮೇಲೆ ಇಡಲ್ಪಟ್ಟಿದೆ ಎಂಬುದನ್ನು ಖಚಿತಗೊಳಿಸಿಕೊಳ್ಳಬೇಕು.

ಯಾವಾಗಲಾದರೂ ಗಣಿಗಳಲ್ಲಿ ಅಪಘಾತ ಸಂಭವಿಸಿ ಕಾರ್ಮಿಕರಿಗೆ ಗಾಯಗಳಾದಾಗ ಗಣಿಯ ಕಾರ್ಯನಿರ್ವಾಹಕರು, ಮೇಸ್ತ್ರಿ ಅಥವಾ ಮಾಲೀಕರು ಇದನ್ನು ನಿರ್ದಿಷ್ಟ ದಾಖಲೆ ಪಟ್ಟಿಯಲ್ಲಿ ನಮೂದಿಸಬೇಕು. ಹಾಗೂ ನಂತರ ಇದನ್ನು ಮುಖ್ಯ ತಪಾಸಣಾಧಿಕಾರಿಗೆ ನೀಡಬೇಕು.

**ಯಾವುದೇ ರೋಗ ಗಮನಕ್ಕೆ ಬಂದಾಗ :**

- ಗಣಿಯಲ್ಲಿ ಕೆಲಸ ಮಾಡುವ ಯಾವುದೇ ವ್ಯಕ್ತಿ ಕೇಂದ್ರ ಸರ್ಕಾರದ ಅಧಿಕೃತ ಸರಕಾರಿ ಪ್ರಕಟಣೆಯಲ್ಲಿ ಸೂಚಿಸಿದ ಗಣಿ ಕಾರ್ಯಾಚರಣೆಗೆ ಸಂಬಂಧಿಸಿದ ರೋಗಗಳಲ್ಲಿ ಯಾವುದೇ ರೋಗಕ್ಕೆ ತುತ್ತಾದಾಗ ಗಣಿಯ ಮಾಲೀಕರು, ಮೇಸ್ತ್ರಿ ಅಥವಾ ಕಾರ್ಯ ನಿರ್ವಾಹಕರು ಇವರುಗಳು ಅಂತಹ ರೋಗದ ಸೂಚನೆಯನ್ನು ಮುಖ್ಯ ತಪಾಸಣಾಧಿಕಾರಿಗಳಿಗೆ ಹಾಗೂ ಉಳಿದ ನಿರ್ದಿಷ್ಟ ಆಡಳಿತ ಮಂಡಳಿಗೆ ನಿಗದಿಪಡಿಸಿದ ಅವಧಿಯೊಳಗಾಗಿ, ನಿರ್ದಿಷ್ಟಪಡಿಸಿದ ರೀತಿಯಲ್ಲಿ ನೀಡಬೇಕು.
- ಗಣಿಯಲ್ಲಿ ಕೆಲಸ ಮಾಡುವ ಯಾವುದೇ ವ್ಯಕ್ತಿಯನ್ನು ವೈದ್ಯರು ತಪಾಸಿಸಿದಾಗ, ಅಂತಹ ವ್ಯಕ್ತಿ ಅಧಿನಿಯಮದ ಅಡಿಯಲ್ಲಿ ಬರುವಂತಹ ಯಾವುದೇ ಕಾಯಿಲೆಯಿಂದ ಬಳಲುತ್ತಿರುವುದು ವೈದ್ಯರ ಗಮನಕ್ಕೆ ಬಂದರೆ, ವಿಳಂಬವಿಲ್ಲದೆ ವೈದ್ಯರ ಲಿಖಿತರೂಪದ ವರದಿಯನ್ನು ಮುಖ್ಯ ತಪಾಸಣಾಧಿಕಾರಿಗೆ, ರೋಗಿಯ ಹೆಸರು, ವಿಳಾಸವನ್ನು, ಹಾಗೂ ವ್ಯಕ್ತಿ ಎಂತಹ ಕಾಯಿಲೆಯಿಂದ ಬಳಲುತ್ತಿದ್ದಾನೆ ಎನ್ನುವುದನ್ನೂ ಹಾಗೂ ರೋಗಿಯು ಕೆಲಸ ಮಾಡುತ್ತಿರುವ ಅಥವಾ ಕಳೆದ ದಿನಗಳಲ್ಲಿ ಕೆಲಸ ಮಾಡಿದ ಗಣಿಯ ಹೆಸರು ವಿಳಾಸದೊಡನೆ ವಿವರಗಳನ್ನು ನಮೂದಿಸಿ ವರದಿ ನೀಡತಕ್ಕದ್ದು.
- ಮುಖ್ಯ ತಪಾಸಣಾಧಿಕಾರಿಗೆ, ವೈದ್ಯರ ವರದಿಯಲ್ಲಿ ನಿಜವಿದೆ ಎಂದು ಮನವರಿಕೆ ಆದರೆ, ಮುಖ್ಯ ತಪಾಸಣಾಧಿಕಾರಿಯು ವೈದ್ಯರಿಗೆ ನಿಗದಿಪಡಿಸಿದಂತಹ ಶುಲ್ಕವನ್ನು ನೀಡತಕ್ಕದ್ದು ಹಾಗೂ ರೋಗಿಯಾದ ವ್ಯಕ್ತಿಗೆ ಯಾವ ಗಣಿಯ ಕಾರ್ಯಾಚರಣೆಯಲ್ಲಿ ರೋಗ ತಗುಲಿದೆಯೋ ಆ ಗಣಿಯ ಮಾಲಿಕ, ಕಾರ್ಯನಿರ್ವಾಹಕ ಅಥವಾ ಮೇಸ್ತ್ರಿಯಿಂದ ಭೂ ಕಂದಾಯದ ಬಾಕಿಯ ರೂಪದಲ್ಲಿ ಮರಳಿ ಪಡೆಯತಕ್ಕದ್ದು.
- ಯಾವುದೇ ವೈದ್ಯರು ದೂರು ನೀಡಲು ವಿಫಲವಾದರೆ

ಅಂತಹ ಅಪರಾಧವು ರೂ. ೫೦/–ರವರೆಗಿನ ದಂಡದ ಜೊತೆ ಶಿಕ್ಷಾರ್ಹವಾಗುತ್ತದೆ.

ವಾರದ ರಜೆ ಕುರಿತು :

- ಅಧಿನಿಯಮದ ನಿರ್ದಿಷ್ಟಪಡಿಸಿದ ಪ್ರಕಾರ ಯಾವುದೇ ವ್ಯಕ್ತಿಯು ಯಾವುದೇ ವಾರದಲ್ಲಿ ೬ ದಿನಗಳಿಗಿಂತ ಹೆಚ್ಚಿಗೆ ಕೆಲಸ ಮಾಡಲು ಅವಕಾಶವಿಲ್ಲ.

ಪರಿಹಾರಾರ್ಥ ರಜಾದಿನದ ಕುರಿತಾಗಿ :

- ಅಧಿನಿಯಮವು ನಿಗದಿಪಡಿಸಿದಂತೆ ನಿರ್ದಿಷ್ಠ ಸನ್ನಿವೇಶ ಅಡಿಯಲ್ಲಿ, ಯಾವುದೇ ಕಾರ್ಮಿಕರು ವಾರದ ರಜಾದಿನಗಳನ್ನು ಕಸಿದುಕೊಳ್ಳಲ್ಪಟ್ಟರೆ, ಆ ತಿಂಗಳಲ್ಲೇ ಅಥವಾ ಆ ತಿಂಗಳನ್ನೇ ಅನುಸರಿಸಿ ೨ ತಿಂಗಳೊಳಗೆ ಆತನು ರಜಾ ತೆಗೆದುಕೊಂಡಿರದ ದಿನಗಳಿಗೆ ಸಮನಾದ ದಿನಗಳ ರಜಾ ನೀಡತಕ್ಕದ್ದು.

ಕೆಲಸ ಮಾಡುವ ಅವಧಿಯ ಕುರಿತು :

- ಯಾವುದೇ ಕಾರ್ಮಿಕರು ಗಣಿಯ ಮೇಲೆ ವಾರಕ್ಕೆ ೪೮ ಗಂಟೆಗಿಂತ ಹೆಚ್ಚು ತಾಸು ಹಾಗೂ ದಿನಕ್ಕೆ ೯ ತಾಸಿಗಿಂತ ಹೆಚ್ಚು ಗಂಟೆಗಿಂತ ಹೆಚ್ಚು ಗಂಟೆ ಕೆಲಸ ಮಾಡಲು ಅವಕಾಶವಿಲ್ಲ. ಅಂತಹ ಸಂದರ್ಭದಲ್ಲಿ ಮುಖ್ಯ ತಪಾಸಣಾಧಿಕಾರಿಯ ಮುಂಚಿತ ಒಪ್ಪಿಗೆ ಪಡೆದು ಕೆಲಸದ ಪಾಳಿಯಲ್ಲಿ ಬದಲಾವಣೆ ಮಾಡಬಹುದಾಗಿದೆ.

- ಗಣಿಯ ಒಳಗಡೆ ಯಾವುದೇ ಕಾರ್ಮಿಕನು ವಾರದಲ್ಲಿ ೪೮ ತಾಸಿಗಿಂತ ಹೆಚ್ಚು ಅವಧಿ ಅಥವಾ ದಿನದ ೮ ತಾಸಿಗಿಂತ ಹೆಚ್ಚು ಅವಧಿ ಕೆಲಸ ಮಾಡುವಂತಿಲ್ಲ. ಅಂತಹ ಸಂದರ್ಭದಲ್ಲಿ ಮುಖ್ಯ ತಪಾಸಣಾಧಿಕಾರಿಯ ಮುಂಚಿತ ಒಪ್ಪಿಗೆಯಿಂದ ಕೆಲಸದ ಪಾಳಿಯಲ್ಲಿ ಬದಲಾವಣೆ ಮಾಡಬಹುದಾಗಿದೆ.

- ಯಾವ್ಯದೇ ವಯಸ್ಕರ ಕೆಲಸದ ಅವಧಿಯು ಅವರ ವಿಶ್ರಾಂತಿಯ ಅವಧಿಯನ್ನು ಒಳಗೊಂಡು, ಯಾವುದೇ ದಿನವೂ ೧೨ ಗಂಟೆಗಿಂತ ಹೆಚ್ಚು ಅವಧಿ ಮೀರಬಾರದು. ಹಾಗೂ ಅರ್ಧಗಂಟೆಯ ವಿಶ್ರಾಂತಿಯ ನಂತರ ೫ ತಾಸಿಗಿಂತ ಹೆಚ್ಚು ಅವಧಿ ನಿರಂತರವಾಗಿ ಕೆಲಸ ಮಾಡಬಾರದು.

ಹೆಚ್ಚುವರಿ ಅವಧಿಯ ಕೆಲಸದ ಸಂಬಳದ ಕುರಿತಾಗಿ :

- ಅಧಿನಿಯಮ ಹೇಳುವ ಪ್ರಕಾರ, ಒಂದು ಗಣಿಯ ಮೇಲೆ ಕಾರ್ಮಿಕನೊಬ್ಬ ದಿನವೊಂದಕ್ಕೆ ೯ ಗಂಟೆಗಿಂತ ಹೆಚ್ಚಿನ ಅವಧಿ ಅಥವಾ ಗಣಿಯ ಒಳಗಡೆ ಕಾರ್ಮಿಕನೊಬ್ಬ ದಿನವೊಂದಕ್ಕೆ ೮ ಗಂಟೆಗಿಂತ ಹೆಚ್ಚಿನ ಅವಧಿ ಅಥವಾ ವಾರವೊಂದಕ್ಕೆ ೪೮ ಗಂಟೆಗಿಂತ ಹೆಚ್ಚಿನ ಅವಧಿ ಕೆಲಸ ಮಾಡಿದರೆ ಅವನಿಗೆ ಹೆಚ್ಚಿ ಅವಧಿಯ (ಒ.ಟಿ.) ಸಂಬಳ ನೀಡಬೇಕಾಗುತ್ತದೆ.

- ಹೆಚ್ಚಿನ ಕೆಲಸದ ಸಂಬಳವು ಆತನ ಸಾಮಾನ್ಯ ಸಂಬಳದ ದರಕ್ಕಿಂತ ಎರಡು ಪಟ್ಟು ಇರಬೇಕು (ಹೆಚ್ಚಿನ ಕೆಲಸದ ಅವಧಿಯನ್ನು ದಿನದ ಆಧಾರ ಅಥವಾ ವಾರದ ಆಧಾರಿತವಾಗಿ ಕಾರ್ಮಿಕನಿಗೆ ಅನುಕೂಲವಾಗುವ ಮಾದರಿಯಲ್ಲಿ ಲೆಕ್ಕ ಹಾಕಿ ಕೊಡಬೇಕು.)

- ಗಣಿಯಲ್ಲಿ ಕೆಲಸ ಮಾಡುವ ಯಾವುದೇ ಕಾರ್ಮಿಕನು ತುಂಡು ಗುತ್ತಿಗೆಯ ಆಧಾರದ ಮೇಲೆ ಹಣ ಪಡೆಯುತ್ತಿದ್ದರೆ ಕೆಲಸದ ಅವಧಿಯ ದರವನ್ನು, ಯಾವುದೇ ಹೆಚ್ಚುವರಿ ಕೆಲಸದ ಅವಧಿಯ ಹೊರತಾಗಿ, ಹೆಚ್ಚುವರಿ ಕೆಲಸ ಮಾಡಿದ ವಾರದ ತತ್‌ಕ್ಷಣದ ಹಿಂದಿನ ವಾರವನ್ನು ತೆಗೆದುಕೊಂಡು ಕಾರ್ಮಿಕರನು ವಾರದಲ್ಲಿ ಕೆಲಸ ಮಾಡಿದ ಅವಧಿಯ ಮೇಲಿನ ದಿನಗಳಿಗೆ, ಆತನ ಪೂರ್ಣಾವಧಿಯ ದಿನನಿತ್ಯದ ಸಂಬಳದ ಸರಾಸರಿಗೆ ಸಮನಾಗಿರುವಂತೆ ನಿಗದಿಪಡಿಸಬೇಕು. ಜೊತೆಗೆ, ಕಾರ್ಮಿಕನೊಬ್ಬ ಒಂದೇ ವಿಧದ ಕೆಲಸದ ಮೇಲೆ ಮೊದಲಿನ ವಾರ ಕೆಲಸ ಮಾಡಿರದಿದ್ದರೆ, ಸಮಯದ ದರವನ್ನು ಆತನು ಕೆಲಸ ಮಾಡಿದ ದಿನಗಳ ಸರಾಸರಿ ಆಧಾರದ ಮೇಲೆ ನಿಗದಿ ಪಡಿಸಬೇಕು. ಇಲ್ಲಿ ಹೆಚ್ಚುವರಿ ಕೆಲಸದ ಅವಧಿಯನ್ನು ಹೊರತು ಪಡಿಸಬೇಕು. ಅಥವಾ ಹಿಂದಿನ ಯಾವುದೇ ವಾರದ ಆತನ ಗಳಿಕೆ, ದಿನನಿತ್ಯದ ಸರಾಸರಿಯ ಆಧಾರದ ಮೇಲೆ ಯಾವುದು ಹೆಚ್ಚಿನದಾಗಿದೆಯೋ ಅದನ್ನು ಪರಿಗಣಿಸಬೇಕು.

೧೮ ವರುಷಕ್ಕಿಂತ ಕೆಳಗಿನ ಕಾರ್ಮಿಕರ ಕುರಿತಾಗಿ :

- ಅಧಿನಿಯಮವು ಹೇಳುವ ಪ್ರಕಾರ, ಯಾವುದೇ ಗಣಿ ಅಥವಾ ಗಣಿಯ ಯಾವುದೇ ಭಾಗದಲ್ಲಿ ೧೮ ವರುಷಕ್ಕಿಂತ ಕೆಳಗಿನವರಿಗೆ ಕೆಲಸ ಮಾಡಲು ಅವಕಾಶವಿಲ್ಲ.

- ಕೆಲಸ ಕಲಿಯುವವ ಹಾಗೂ ಉಳಿದ ತರಬೇತಿದಾರರು ೧೬ ವರುಷಕ್ಕಿಂತ ಕೆಳಗಿನವರಾಗಿದ್ದರೆ, ಕಾರ್ಯ ನಿರ್ವಾಹಕರ ಮೂಲಕ ಗಣಿ ಅಥವಾ ಗಣಿಯ ಯಾವುದಾದರೂ ಭಾಗದಲ್ಲಿ ಸರಿಯಾದ ಮೇಲ್ವಿಚಾರಕರ ಅಡಿಯಲ್ಲಿ ಕೆಲಸ ಮಾಡಬಹುದಾಗಿದ್ದು, ತರಬೇತಿದಾರರು ಇರುವ ಸನ್ನಿವೇಶದಲ್ಲಿ ಕೆಲಸ ಕಲಿಯುವವರ ಹೊರತಾಗಿ, ಮುಖ್ಯ ತಪಾಸಣಾಧಿಕಾರಿ ಅಥವಾ ತಪಾಸಣಾಧಿಕಾರಿಯ ಅನುಮತಿಯನ್ನು, ಅವರಿಗೆ ಅವಕಾಶ ನೀಡುವ ಮೊದಲು ಪಡೆಯತಕ್ಕದ್ದು.
- ಅಧಿನಿಯಮವು ೧೮ ವರುಷಕ್ಕಿಂತ ಕೆಳಗಿನ ವ್ಯಕ್ತಿಯು ಗಣಿಯ ಮೇಲಿನ ಪ್ರದೇಶದಲ್ಲಿ ಯಾವುದೇ ಗಣಿ ಕಾರ್ಯಾಚರಣೆ ಅಥವಾ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿಷೇಧಿಸುತ್ತದೆ.

ಮಹಿಳೆಯರ ಉದ್ಯೋಗದ ಕುರಿತು :

ಅಧಿನಿಯಮವು ಸ್ಪಷ್ಟವಾಗಿ ಹೇಳುತ್ತದೆ :

- ಯಾವುದೇ ಮಹಿಳೆಯನ್ನೂ ಗಣಿಯ ಒಳಗಡೆ ಯಾವುದೇ ಭಾಗದಲ್ಲೂ ಕೆಲಸಕ್ಕೆ ನಿಯಮಿಸಿಕೊಳ್ಳುವಂತಿಲ್ಲ.
- ಮುಂಜಾನೆ ೬ ಗಂಟೆಯಿಂದ ಸಂಜೆ ೭ ಗಂಟೆಯ ಹೊರತಾಗಿ ಬೇರೆ ಸಮಯದಲ್ಲಿ ಗಣಿಯ ಮೇಲಿನ ಪ್ರದೇಶದಲ್ಲಿಯೂ ಮಹಿಳೆಯರು ಕೆಲಸ ಮಾಡುವಂತಿಲ್ಲ.
- ಗಣಿಯಲ್ಲಿ ಮೇಲಿನ ಭಾಗದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಯಾವುದೇ ಒಂದು ದಿನ ಉದ್ಯೋಗದ ಸಮಾಪ್ತಿಯ ಹಾಗೂ ಮುಂದಿನ ಉದ್ಯೋಗದ ಅವಧಿಯ ಆರಂಭದ ನಡುವೆ ೧೧ ತಾಸಿಗಿಂತ ಕಡಿಮೆ ಇಲ್ಲದ ಹಾಗೆ ನಿರಂತರ ಕೆಲಸ ಮಾಡಿದ್ದರೆ ಆಗ ವಿಶ್ರಾಂತಿಗೆ ಅವಕಾಶ ನೀಡಬೇಕು.
- ಕೇಂದ್ರಸರ್ಕಾರವು ಅಧಿಕೃತ ಸರಕಾರಿ ಪ್ರಕಟಣೆಯಲ್ಲಿ ವಿಜ್ಞಾಪನೆ (ನೋಟಿಫಿಕೇಷನ್) ಮೂಲಕ ಗಣಿಯ ಮೇಲೆ ಕೆಲಸ ಮಾಡುವ ಮಹಿಳೆಯು ಯಾವುದೇ ಗಣಿಗೆ ಸೇರಿರಲಿ, ಯಾವುದೇ ದರ್ಜೆ ಅಥವಾ ವರ್ಗಕ್ಕೆ ಸೇರಿರಲಿ ಅಂತವರ ಕೆಲಸದ ಅವಧಿಯಲ್ಲಿ ಬದಲಾವಣೆ ಮಾಡಬಹುದಾಗಿದೆ. ಆದ್ದಾಗ್ಯೂ ಯಾವುದೇ ಮಹಿಳೆಯು ರಾತ್ರಿ ೧೦ರಿಂದ ಬೆಳಿಗ್ಗೆ ೫ ಗಂಟೆಯವರೆಗೆ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ.
- ಈ ಅಧಿನಿಯಮದ ಅಡಿಯಲ್ಲಿ ಗಣಿ ಶಿಶುವಿಹಾರ ಕಾಯಿದೆ ೧೯೬೬ರ ಪ್ರಕಾರ, ಯಾವ ಮಹಿಳಾ ಕಾರ್ಮಿಕಳು ಒಂದು ಗಣಿಯಲ್ಲಿ ೧೨ ತಿಂಗಳಿಗಿಂತ ಹೆಚ್ಚು ಅವಧಿ ಕೆಲಸ ಮಾಡಿರುತ್ತಾಳೋ, ಅಂತಹ ಮಹಿಳೆಯರಿಗಾಗಿ ಅವರ ೬ ವರುಷದೊಳಗಿನ ಮಕ್ಕಳಿಗಾಗಿ ಒಂದು ವಿಶೇಷ ಕೊಠಡಿಯನ್ನು ಮೀಸಲಾಗಿ ಇಟ್ಟಿರಬೇಕು. ಶಿಶುವಿಹಾರವನ್ನು ನೋಡಿಕೊಳ್ಳಲು ತರಬೇತಿ ಪಡೆದ ಸಿಬ್ಬಂದಿಯನ್ನು ಇಡಬೇಕು. ಯಾವ ಬಗೆಯ ಶಿಶುವಿಹಾರವಿದೆಯೋ ಅದಕ್ಕೋಸ್ಕರ ನಿರ್ದಿಷ್ಟ ಗುಣಮಟ್ಟವಿರುವ ಹಾಗೂ ಪೌಷ್ಠಿಕ ಆಹಾರದ ಸಮೇತ ಅವುಗಳಿಗೆ ಏನೇನು ಸೌಕರ್ಯಗಳನ್ನು ಒದಗಿಸಬೇಕೋ ಅವುಗಳನ್ನು ಒದಗಿಸಬೇಕು. ಅಕ್ಕಪಕ್ಕದ ಗಣಿ ಮಾಲೀಕರು ಪರಸ್ಪರ ಸಹಯೋಗದಿಂದಲೂ ಶಿಶುವಿಹಾರಕ್ಕೆ ಸೌಕರ್ಯ ಒದಗಿಸಬಹುದಾಗಿದೆ.
- ಕಾಯಿದೆ, ನಿಯಮ, ಉಪನಿಯಮಗಳು, ಗಣಿಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕಳ ಜೀವಕ್ಕೆ, ಸುರಕ್ಷತೆಗೆ, ಆರೋಗ್ಯಕ್ಕೆ ಹಾನಿ ಮಾಡುವಂತಹ ಯಾವುದೇ ಬಗೆಯ ಕೆಲಸವನ್ನು ಗಣಿಯ ಯಾವುದೇ ವಿಭಾಗದಲ್ಲಿ ಅಥವಾ ಗಣಿಯಲ್ಲಿ ಮಾಡುವುದಕ್ಕೆ ನಿಷೇಧಿಸುವ, ನಿರ್ಬಂಧಿಸುವ, ನಿಯಂತ್ರಿಸುವ ಅಧಿಕಾರವನ್ನು ನೀಡುತ್ತದೆ ಹಾಗೂ ಅಂತಹ ಮಹಿಳಾ ಕಾರ್ಮಿಕರು ಹೊರುವಂತಹ ಭಾರಕ್ಕೆ ಮಿತಿ ಹಾಕುತ್ತದೆ.

ಸಂಬಳ ಸಹಿತ ರಜೆಯ ಕುರಿತು

- ಅಧಿನಿಯಮವು ಸ್ಪಷ್ಟಪಡಿಸುವ ಪ್ರಕಾರ, ರಜೆಯು, ವಾರದ ರಜಾದಿನ, ರಜಾದಿನಗಳು ಅಥವಾ ಹಬ್ಬಗಳು ಅಥವಾ ಕೆಲಸದ ಕಾಲಾವಧಿಯ ಕೊನೆಯಲ್ಲಿ ಅಥವಾ ಕೆಲಸದ ವೇಳೆಯಲ್ಲಿ ಅಂತಹ ರಜಾದ ಸನ್ನಿವೇಶ ಬಂದರೆ ಅದನ್ನು ಕಾರ್ಮಿಕನ ರಜಾ ದಿನಗಳಿಗೆ ಸೇರಿಸಲಾಗುವುದಿಲ್ಲ.
- ಗಣಿಯ ಮೇಲ್ಗಡೆ ಕೆಲಸ ಮಾಡುವವರ ವಾರ್ಷಿಕ ರಜೆಯ ಕುರಿತಾಗಿ ಅಧಿನಿಯಮವು ಸ್ಪಷ್ಟಪಡಿಸುವಂತೆ, ಗಣಿಯಲ್ಲಿ ಕೆಲಸ ಮಾಡುವಂತಹ ಪ್ರತಿಯೊಬ್ಬ ಕಾರ್ಮಿಕನು, ಯಾರು ಕ್ಯಾಲೆಂಡರ್ ವರುಷದ (ಜನವರಿಯಿಂದ ಡಿಸೆಂಬರ್‌ವರೆಗಿನ ೧೨ ತಿಂಗಳು) ಸೇವೆಯನ್ನು ಪೂರ್ಣಗೊಳಿಸಿರುವನೋ, ಅಂತಹ ಕಾರ್ಮಿಕನು, ಕೆಲಸ ಮಾಡಿದ ಪ್ರತಿ ೨೦ ದಿನಗಳಿಗೆ ಒಂದು ದಿವಸದ ದರದಂತೆ

















ಲೆಕ್ಕ ಹಾಕಿ, ಮುಂದಿನ ಕ್ಯಾಲೆಂಡರ್ ವರುಷದ ಅವಧಿಯಲ್ಲಿ ಸಂಬಳ ಸಹಿತ ರಜೆ ಪಡೆಯಲು ಅರ್ಹನಾಗುತ್ತಾನೆ.

- ಈ ಕೆಳಗಿನ ಆಧಾರದ ಸನ್ನಿವೇಶದಲ್ಲಿ ಸಂಬಳ ಸಹಿತ ರಜೆಯು, ಕೆಲಸ ಮಾಡಿದ ಪ್ರತಿ ಹದಿನೈದು ದಿನಗಳಿಗೆ ಒಂದು ದಿನದಂತೆ ಲೆಕ್ಕ ಹಾಕಲ್ಪಡಬೇಕು.
- ಈ ಅಧಿನಿಯಮವು ಹೇಳುವಂತೆ ರಜೆಯ ಸಹಿತ ಸಂಬಳವು ಕೆಲಸ ಮಾಡುವ ದಿನದ ಸಂಬಳಕ್ಕೆ ಸಮನಾಗಿರಬೇಕು.

ನೆರಳು ಅಥವಾ ವಿಶ್ರಾಂತಿ ಗೃಹದ ಕುರಿತು :

- ಅಧಿನಿಯುವುದ ಕಾಯಿದೆ (ನಿಯುವು) ಗಳು ಸ್ಪಷ್ಟಪಡಿಸುವಂತೆ, ಯಾವುದೇ ಗಣಿಯಲ್ಲಿ ೫೦ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರೆ, ಅವರ ವಿಶ್ರಾಂತಿ ಹಾಗೂ ಆಹಾರ ಸೇವನೆಗೆ ಒಂದು ಕೊಠಡಿಯನ್ನು ಮೀಸಲಿರಿಸಬೇಕು.
- ಅಂತಹ ಕೊಠಡಿಯನ್ನು ಎಲ್ಲ ಬಗೆಯ ಹವಾಮಾನದಿಂದ ರಕ್ಷಿಸಿಕೊಳ್ಳುವಂತೆ ಕಟ್ಟಬೇಕು. ಕುಡಿಯುವ ನೀರು ಸ್ವಚ್ಛವಾಗಿದ್ದು ಸದಾ ಕಾಲ ದೊರಕುವಂತಿರಬೇಕು. ಸದಾಕಾಲ ಕೊಠಡಿಯು ಸ್ವಚ್ಛವಾಗಿ ಬಳಸುವ ಸ್ಥಿತಿಯಲ್ಲಿ ಇರಬೇಕು.

**೧೯೫೨ರ ಗಣಿ ಕಾಯಿದೆಯ ಅಡಿಯಲ್ಲಿನ ಪ್ರಸಂಗೋಚಿತ ಅಧ್ಯಾಯಗಳು**

ಅಧ್ಯಾಯ ೧ – ಪೀಠಿಕೆ : ಪದಗಳ ವಿವರಣೆ

ಅಧ್ಯಾಯ ೫– ಗಿ ಆರೋಗ್ಯ ಮತ್ತು ಸುರಕ್ಷತೆಯ ಕುರಿತಾಗಿ ಇರುವ ನಿಯಮಗಳು

೧೯ – ಕುಡಿಯುವ ನೀರು

೨೦ – ಶೌಚಾಲಯ

೨೧ – ವೈದ್ಯಕೀಯ ಸೌಲಭ್ಯ

೨೩ – ಅಪಘಾತಗಳ ಬಗ್ಗೆ ಮುನ್ನೆಚ್ಚರಿಕೆ ಕೊಡುವ್ವದು.

೨೫ –ಕೆಲವು ರೋಗಗಳ ಬಗ್ಗೆ ಮುನ್ನೆಚ್ಚರಿಕೆ ಕೊಡುವುದು.

ಅಧ್ಯಾಯ ೬:–ಕೆಲಸದ ಅವಧಿ ಹಾಗೂ ಮಿತಿ.

೨೮ – ವಾರದ ರಜಾದಿನ

೨೯ – ಪರಿಹಾರ ರಜಾದಿನ

೩೦ – ಗಣಿಯ ಮೇಲ್ಭಾಗದ ಕೆಲಸದ ಅವಧಿ

೩೧ – ಗಣಿಯ ಒಳಗಡೆ ಕೆಲಸದ ಅವಧಿ

೩೨ – ರಾತ್ರಿ ಪಾಳಿಯ ಕೆಲಸ

೩೩ – ಹೆಚ್ಚುವರಿ ಅವಧಿಯ ಕೆಲಸಕ್ಕೆ ಹೆಚ್ಚಿನ ಸಂಬಳ

೩೫ – ಹೆಚ್ಚುವರಿ ಕೆಲಸದ ಅವಧಿಯನ್ನು ಒಳಗೊಂಡು ದಿನದ ಕೆಲಸದ ಅವಧಿಯ ಮಿತಿ.

೪೦ – ೧೮ ವರುಷದೊಳಗಿನ ವ್ಯಕ್ತಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು.

೪೧ – ಮಹಿಳೆಯರನ್ನು ನೇಮಿಸಿಕೊಳ್ಳುವುದು

ಅಧ್ಯಾಯ ೭ – ಸಂಬಳ ಸಹಿತ ರಜಾ

ಅಧ್ಯಾಯ ೮ –ಕಾನೂನು, ನಿಯಮ, ಉಪನಿಯಮ ೫೭ (ಜೆ) ೫೮ (ಡಿ) & (ಇ)

**ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಹಾಗೂ ನಿರ್ಮೂಲನ) ಕಾಯಿದೆ ೧೯೭೦**

- ಎಲ್ಲಿ ೨೦ ಅಥವಾ ೨೦ಕ್ಕಿಂತ ಹೆಚ್ಚು ಮಹಿಳಾ ಗುತ್ತಿಗೆ ಕಾರ್ಮಿಕರು ಇರುತ್ತಾರೋ ಅಲ್ಲಿ ಶಿಶುವಿಹಾರದ ಸೌಲಭ್ಯವನ್ನು ಒದಗಿಸಬೇಕು.
- ಯಾವುದೇ ಗುತ್ತಿಗೆದಾರನು ಗುತ್ತಿಗೆ ಮಹಿಳಾ ಕಾರ್ಮಿಕರನ್ನು ಮುಂಜಾನೆ ೬ ಗಂಟೆಯಿಂದ ಸಂಜೆ ೭ ಗಂಟೆಯವರೆಗೆ ಮಾತ್ರ ಕೆಲಸ ಮಾಡಿಸಿಕೊಳ್ಳಬಹುದು. ಸೂಲಗಿತ್ತಿ, ಆಸ್ಪತ್ರೆಯಲ್ಲಿ ಇರುವ ದಾದಿಯರು ಇದಕ್ಕೆ ಹೊರತಾಗಿರುತ್ತಾರೆ.

**ಅಂತರಾಜ್ಯ ವಲಸೆ ಕಾರ್ಮಿಕರ ಕಾಯಿದೆ ೧೯೭೯ :**

**(ಉದ್ಯೋಗದ ನಿಯಂತ್ರಣ ಹಾಗೂ ಸೇವೆಯ ನಿಬಂಧನೆಗಳು)**

- ಈ ಕಾಯಿದೆಯು ಸ್ಪಷ್ಟಪಡಿಸುವಂತೆ, ಎಲ್ಲಿ ೨೦ ಅಥವಾ ೨೦ಕ್ಕಿಂತ ಹೆಚ್ಚು ಮಹಿಳೆಯರು ವಲಸೆ ಕಾರ್ಮಿಕರಂತೆ

ರೂಢಿಗತವಾಗಿ ಉದ್ಯೋಗಕ್ಕೆ ನೇಮಕ ಮಾಡಿಕೊಂಡಾಗ ಹಾಗೂ ವಲಸೆಗಾರರ ಉದ್ಯೋಗವು ೩ ತಿಂಗಳು ಅಥವಾ ಹೆಚ್ಚು ಅವಧಿಗೆ ಮುಂದುವರಿದರೆ ಮಹಿಳಾ ಕಾರ್ಮಿಕರ ಒಳಿತಿಗಾಗಿ ಶಿಶುವಿಹಾರದ ಸೌಕರ್ಯ ನೀಡಬೇಕು.

**ಹೆರಿಗೆ ಸವಲತ್ತು ಕಾಯಿದೆ ೧೯೬೧**

- ೮೦ ದಿನಗಳ ಕೆಲಸ ಪೂರ್ಣವಾದವರಿಗೆ ಹೆರಿಗೆ ಸೌಲಭ್ಯವು ನೀಡಲ್ಪಡಬೇಕು.
- ಹೆರಿಗೆ ಅಥವಾ ಗರ್ಭಪಾತದ ದಿನದಿಂದ ೬ ವಾರಗಳ ತನಕ ಕೆಲಸ ಮಾಡಿಸಕೂಡದು.
- ಹೆರಿಗೆಯಾಗುವ ಹಿಂದಿನ ವಾರಕ್ಕೆ ಇನ್ನೂ ೬ ತಿಂಗಳ ಅವಧಿ ಇರುವಾಗ ಪ್ರಯಾಸಕರವಾದ ಹಾಗೂ ಗರ್ಭದ / ಭ್ರೂಣದ ಸಾಮಾನ್ಯ ಬೆಳವಣಿಗೆಗೆ ತೊಂದರೆಯಾಗುವಂತಹ, ದೀರ್ಘಕಾಲ ನಿಂತು ಮಾಡುವ ಕೆಲಸದಿಂದ ಗರ್ಭಪಾತ ಅಥವಾ ಆರೋಗ್ಯಕ್ಕೆ ಧಕ್ಕೆ ಆಗುವ ಕಾರಣದಿಂದ ಅಂತಹ ಕೆಲಸ ಮಾಡಿಸಬಾರದು. ವೈದ್ಯಕೀಯ ಪ್ರಮಾಣಪತ್ರದೊಡನೆ ಹೆರಿಗೆ ಮುಂಚಿನ ಸೌಲಭ್ಯ ನೀಡತಕ್ಕದ್ದು.
- ಜನನ ಪೂರ್ವ ಪ್ರಸೂತಿ ಹಾಗೂ ಜನನಾನಂತರ ಯೋಗಕ್ಷೇಮವನ್ನು ಉಚಿತವಾಗಿ ಮಾಡಿರದಿದ್ದರೆ, ರೂ. ೨೫೦/–ನ್ನು ಹೆರಿಗೆ ಭತ್ಯೆ ನೀಡತಕ್ಕದ್ದು.

**ಹೆರಿಗೆ ಸವಲತ್ತು ಕಾಯಿದೆ ೧೯೬೩ (ಗಣಿ ಹಾಗೂ ಸರ್ಕಸ್)**

- ಈ ಕಾಯಿದೆಯಡಿಯಲ್ಲಿ, ಪ್ರತಿಯೊಬ್ಬ ಗಣಿ ಮಾಲೀಕರು ಗಣಿಯಲ್ಲಿನ ಮಹಿಳಾ ಕಾರ್ಮಿಕರ ವಿಸ್ತೃತ ವಿವರಣೆಯೊಡನೆ ದೈನಂದಿನ ಹಾಜರಿಪಟ್ಟಿಯನ್ನು ಇಟ್ಟಿರತಕ್ಕದ್ದು.
- ಯಾವುದೇ ಮಹಿಳೆಯು ಕೆಲಸಕ್ಕೆ ನೇಮಕವಾದಾಗ ಹಾಗೂ ಹೆರಿಗೆ ಸವಲತ್ತಿಗೆ ಇನ್ನೂ ಆಕೆ ಒಳಪಟ್ಟಿಲ್ಲ ಎಂದಾದಾಗ, ಮಾಲೀಕರು ನೀಡಬಹುದಾದ ಹೆರಿಗೆಯ ಭತ್ಯೆ ಮತ್ತು ಸವಲತ್ತು ಬಾಕಿ ಮೊತ್ತವನ್ನು ನೀಡಬೇಕಾದರೆ, ಮಹಿಳಾ ಕಾರ್ಮಿಕಳು, ವೈದ್ಯರಿಂದ ಅಗತ್ಯವಿರುವ ಪ್ರಮಾಣಪತ್ರವನ್ನು ಪಡೆದು ನೀಡತಕ್ಕದ್ದು.
- ಸಂಬಳ ಹಾಗೂ ವೈದ್ಯಕೀಯ ಭತ್ಯೆಗಳನ್ನು ಸಹ ನಿಗದಿತ ನಿಯಮಗಳ ಪ್ರಕಾರವೇ ಕಾರ್ಮಿಕರಿಗೆ ನೀಡತಕತಕ್ಕದ್ದು.
- ಹಾಲೂಡುವ ತಾಯಂದಿರು ೧೫ ನಿಮಿಷಗಳ ಎರಡು ವಿರಾಮಗಳಿಗೆ ಅರ್ಹರಿದ್ದು, ಪ್ರತಿ ವಿರಾಮಕ್ಕೂ ೫ ನಿಮಿಷಗಳ ಹೆಚ್ಚುವರಿ ವೇಳೆಯನ್ನು ಹೋಗಿ ಬರಲಿಕ್ಕಾಗಿ ಕೊಡಬೇಕು.

**ಸಮಾನ ಸಂಬಳ ಕಾಯಿದೆ ೧೯೭೬**

- ಈ ಕಾಯಿದೆಯಡಿಯಲ್ಲಿ ಪುರುಷ ಹಾಗೂ ಮಹಿಳಾ ಕಾರ್ಮಿಕರು ಮಾಡುವ ಒಂದೇ ವಿಧದ ಕೆಲಸ ಅಥವಾ ಪರಸ್ಪರ ಹೋಲುವಂತಹ ಕೆಲಸಗಳಿಗೆ ಸಮಾನ ಸಂಬಳವನ್ನು ನೀಡತಕ್ಕದೆಂದು ಹೇಳಲಾಗಿದೆ.
- ಯಾವುದೇ ಕಾನೂನಿನ ಮೂಲಕ, ಮಹಿಳೆಯರಿಗೆ ನಿರ್ಬಂಧಿಸಿದ ಅಥವಾ ನಿಷೇಧಿಸಿದ ಉದ್ಯೋಗದ ಹೊರತಾಗಿ ನೇಮಕಾತಿ ಅಥವಾ ಸೇವೆಯಲ್ಲಿ ಪಕ್ಷಪಾತವನ್ನು ಮಾಡಕೂಡದು.

**ಉದ್ಯೋಗಿಯ ರಾಜ್ಯ ವಿಮಾ (ಸಾಮಾನ್ಯ) ಕಾಯಿದೆ ೧೯೫೦**

- ಗರ್ಭಪಾತ, ಗರ್ಭಿಣಿ ಇರುವಾಗ ಬರುವ ಕಾಯಿಲೆಗಳು, ೯ ತಿಂಗಳಿಗಿಂತ ಮೊದಲೇ ಮಗು ಹುಟ್ಟುವುದು, ಹೆರಿಗೆ ಇಂತಹ ವಿಷಯಗಳನ್ನೊಳಗೊಂಡ ಹೆರಿಗೆ ಭತ್ಯೆ ಮತ್ತು ಸವಲತ್ತುಗಳನ್ನು ವೈದ್ಯಕೀಯ ಪ್ರಮಾಣಪತ್ರ ನೀಡಿದ ದಿನಾಂಕದಿಂದ ಲೆಕ್ಕ ಹಾಕಿ ನೀಡಬೇಕು.
- ಗರ್ಭಪಾತ, ಗರ್ಭಿಣಿ ಇರುವಾಗಿನ ಆರೋಗ್ಯ ಸಮಸ್ಯೆಗಳು, ಹೆರಿಗೆ, ಅವಧಿ ಪೂರ್ವ ಪ್ರಸವ ಇವೇ ಮೊದಲಾದ ಸಂಗತಿಗಳಿಗೆ ವೈದ್ಯಕೀಯ ಪ್ರಮಾಣಪತ್ರ ನೀಡಿದ ದಿನಾಂಕದಿಂದಲೇ ಹೆರಿಗೆ ಭತ್ಯೆ ಹಾಗೂ ಸವಲತ್ತುಗಳನ್ನು (ಸರ್ವ ಸಾಮಾನ್ಯ ಕಾಯಿದೆ ೧೯೫೦) ಸಲ್ಲಿಸಬೇಕಾಗುತ್ತದೆ.

**ಕೈಗಾರಿಕಾ ಉದ್ಯೋಗ ಕಾಯಿದೆ ೧೯೬೪ (ಸ್ಥಿರ ಆದೇಶ)**

- ಮಹಿಳಾ ಕಾರ್ಮಿಕರಿಗೆ ಅವರು ಕೆಲಸ ಮಾಡುವ ಸ್ಥಳದಲ್ಲಿನ ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆಯ ಕುರಿತ ನಿಯಮಗಳು

**ಕಬ್ಬಿಣದ ಅದಿರಿನ ಗಣಿ, ಮ್ಯಾಂಗನೀಸ್ ಅದಿರಿನ ಗಣಿ, ಕ್ರೋಮ್ ಅದಿರಿನ ಗಣಿ, ಕಾರ್ಮಿಕ ಯೋಗಕ್ಷೇಮ ನಿಧಿ ಕಾಯಿದೆ**

**೧೯೭೬, ಸುಣ್ಣದ ಕಲ್ಲು ಹಾಗೂ ಡೊಲೋಮೈಟ್ ಗಣಿ ಕಾರ್ಮಿಕ ಯೋಗಕ್ಷೇಮ ನಿಧಿ ಕಾಯಿದೆ ೧೯೭೨, ಅಬ್ರಕ ಅದಿರು ಕಾರ್ಮಿಕ ಯೋಗಕ್ಷೇಮ ನಿಧಿ ಕಾಯಿದೆ ೧೯೪೬**

ಈ ಕಾಯಿದೆಯನ್ವಯ ಸಲಹಾ ಹಾಗೂ ಕೇಂದ್ರ ಸಲಹಾ ಸಮಿತಿಯಲ್ಲಿ ಮಹಿಳಾ ಸದಸ್ಯರ ನೇಮಕವು ಕಡ್ಡಾಯವಾಗಿದೆ.

***ಯಾವುದೇ ಮಹಿಳಾ ಅಥವಾ ಪುರುಷ ಗಣಿ ಕಾರ್ಮಿಕರಿಗಾಗಿ ಈ ಮೇಲಿನ ಯಾವ ನಿಯಮಾವಳಿಯನ್ನೂ ಪರಿಣಾಮಕಾರಿಯಾಗಿ ಜಾರಿಗೆ ತಂದಿಲ್ಲ. ಕಾರ್ಮಿಕರ ಒಕ್ಕೂಟಗಳು ಹಾಗೂ ಗಣಿ ಕಾರ್ಮಿಕರ ಜೊತೆ ಕೆಲಸ ಮಾಡುವ ಸ್ವಯಂ ಸೇವಾಸಂಸ್ಥೆಗಳು ಹಾಗೂ ಕಾರ್ಮಿಕರು ಒಗ್ಗೂಡಿ ಈ ನಿಯಮಗಳ ಪ್ರಯೋಜನ ಪಡೆದು ತಮ್ಮ ಹಕ್ಕಿಗಾಗಿ ಬೇಡಿಕೆ ಇಡಬೇಕಾಗ್ತಿದೆ.***

**ಭಾರತದಲ್ಲಿ ಮಹಿಳೆಯರಿಗಾಗಿ ಶಾಸನ ಹಾಗೂ ಯೋಜನೆಯ ರೂಪರೇಷೆ**

ಭಾರತದಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಯು ಪ್ರತಿಬಂಧಕ, ಉತ್ತೇಜಕ ಹಾಗೂ ರಕ್ಷಣಾತ್ಮಕ ಕ್ರಮಗಳನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯಲ್ಲಿರುತ್ತದೆ. ಅವು ಸರಕಾರೀ ಇರಬಹುದು, ಅಥವಾ ಖಾಸಗಿ ಸಾಮಾಜಿಕವೂ ಆಗಿರಬಹುದು. ಬೇರೆ ಬೇರೆ ಯೋಜನೆಗಳು ಭಿನ್ನ ಭಿನ್ನ ವಿಷಯಗಳನ್ನು ಒಳಗೊಳ್ಳುತ್ತದೆ. ಕೆಲವು ನಿರ್ದಿಷ್ಟವಾಗಿದ್ದು ಮಹಿಳೆಯರು ಹಾಗೂ ಆದಿವಾಸಿಗಳೇ ಮೊದಲಾದ ವಿಶೇಷ ಗುಂಪಿನ ಮೇಲೆ ಬೆಳಕು ಚೆಲ್ಲುತ್ತದೆ. ಆದರೆ ಇನ್ನು ಉಳಿದವುಗಳು ವಿಶಾಲ ವ್ಯಾಪ್ತಿಯವುಗಳಾಗಿದ್ದು ಎಲ್ಲಾ ಬಗೆಯ ಅಸಂಘಟಿತ ಕಾರ್ಮಿಕರನ್ನೊಳಗೊಳ್ಳುತ್ತದೆ. ಈ ಯೋಜನೆಯ ಕಾರ್ಯವನ್ನು ಬೇರೆ ಬೇರೆ ಸೇವೆ ಒದಗಿಸುವ ಸಂಸ್ಥೆಗಳು (ಏಜೆನ್ಸಿ) ಕೇಂದ್ರ ಸರಕಾರದ ಬೇರೆ ಬೇರೆ ಸಚಿವಾಲಯ (ಉದಾಹರಣೆಗೆ ಕಾರ್ಮಿಕ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮೊದಲಾದವು) ಸರಕಾರದ ಸೇವೆ ಒದಗಿಸುವ ಸಂಸ್ಥೆಗಳು ಇವೆಲ್ಲವೂ ಇದರ ಕಾರ್ಯವನ್ನು ನಿರ್ವಹಿಸುತ್ತದೆ. ಇದರ ಜೊತೆ ರಾಜ್ಯಗಳು ಕೂಡ ತಮ್ಮ ಮಟ್ಟದಲ್ಲಿ ಹೊಸ ಯೋಜನೆಗಳನ್ನು ಸೇರಿಸಬಹುದಾಗಿದ್ದು ಇವುಗಳ ಸಾಮಾಜಿಕ ಭದ್ರತೆ, ಮಹಿಳಾ ಅಭಿವೃದ್ಧಿ ಹಾಗೂ ಅಧಿಕಾರ ಬಲಪಡಿಸುವ ಯೋಜನೆಗಳನ್ನು ಒಳಗೊಂಡಿರಬಹುದಾಗಿದೆ. ಇಲ್ಲಿ ಈ ಯೋಜನೆಗಳು ಬಹಳಷ್ಟು ಸಂಖ್ಯೆಯಲ್ಲಿದ್ದು ಬೇರೆ ಬೇರೆ ರಾಜ್ಯಗಳದ್ದು ಬೇರೆ ಬೇರೆಯಾಗಿಯೇ ಇವೆ. ಅವುಗಳೆಲ್ಲವುಗಳ ಪಟ್ಟಿಯನ್ನು ಇಲ್ಲಿ ನೀಡುವುದಕ್ಕೆ ಸಾಧ್ಯವಾಗುವುದಿಲ್ಲವಾದರೂ ಬೇರೆ ಬೇರೆ ರಾಜ್ಯಗಳಲ್ಲಿ ಮಹಿಳಾ ಗಣಿ ಕಾರ್ಮಿಕರು ಏನು ಪಡೆಯಬಹುದೋ ಅಂತಹ ಕೆಲವು ಮುಖ್ಯ ಯೋಜನೆಯ ವಿಧಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

೧. ವಿಮಾ ಯೋಜನೆಗಳು :- ಅಸಂಘಟಿತ ಕಾರ್ಮಿಕ ವರ್ಗಗಳಿಗಾಗಿ ಭಾರತೀಯ ಸಾಮಾನ್ಯ ಜೀವವಿಮಾ ಸಂಸ್ಥೆ ಹಾಗೂ ಜೀವವಿಮಾ ಸಂಸ್ಥೆಯ ಗುಂಪು ಜೀವವಿಮಾ ಯೋಜನೆಗಳಾದ ಬಡತನದ ರೇಖೆಗಿಂತ ಕೆಳಗಿನ ಅಥವಾ ರೇಖೆಗೆ ಅಂಚಿನಲ್ಲಿ ಇರುವ ಜನರಿಗಾಗಿ ಜನಶ್ರೀ ವಿಮಾ ಯೋಜನೆ : ಅಸಂಘಟಿತ ಕ್ಷೇತ್ರವನ್ನು ಒಳಗೊಂಡ ಭೂರಹಿತ ಗ್ರಾಮೀಣ ಕುಟುಂಬಗಳಿಗಾಗಿ ಆಮ್ ಆದ್ಮಿ ವಿಮಾ ಯೋಜನೆ : ಅಸಂಘಟಿತ ಕ್ಷೇತ್ರದಲ್ಲಿನ ಬಡತನದ ರೇಖೆಗಿಂತ ಕೆಳಗಿನ ಕುಟುಂಬಗಳಿಗಾಗಿ ಇರುವ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ ಎಂದು ಕರೆಯಲ್ಪಡುವ ರಾಷ್ಟ್ರೀಯ ಆರೋಗ್ಯ ವಿಮಾ ಯೋಜನೆ.

೨. ಉದ್ಯೋಗ ಉದ್ದೇಶಿತ ಯೋಜನೆಗಳು : ಸ್ವರ್ಣ ಜಯಂತಿ ಗ್ರಾಮ ಸ್ವ-ರೋಜ್‌ಗಾರ್ ಯೋಜನಾ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನಾ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನಾ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಇವುಗಳು ಅಸಂಘಟಿತ ಕ್ಷೇತ್ರಕ್ಕೆ ಮೀಸಲಾಗಿ ಇರುವ ಯೋಜನೆಗಳಾಗಿವೆ.

೩. ಪಿಂಚಣಿ ಯೋಜನೆಗಳು: ವಿಧವೆಯರು, ಮಾನಸಿಕ ವಿಕಲ ಚೇತನರು ಮೊದಲಾದವರಿಗಾಗಿ ಮೀಸಲಾಗಿರುವ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ.

೪. ನಿರುದ್ಯೋಗ ಭತ್ಯೆ : ರಾಜೀವ್ ಗಾಂಧಿ ಶ್ರಮಿಕ್ ಕಲ್ಯಾಣ ಯೋಜನೆ, ಇದು ಉದ್ಯೋಗಿಗಳ ರಾಜ್ಯ ವಿಮಾ ಸಂಸ್ಥೆಯ ಅಡಿಯಲ್ಲಿ ಬರುವ ಯೋಜನೆಯಾಗಿದೆ.

೫. ಆಹಾರ ಭದ್ರತೆ ಯೋಜನೆ: ಮಹಿಳೆಯರಿಗಾಗಿ ಪೌಷ್ಠಿಕ ಆಹಾರ ಪೂರೈಸುವುದಕ್ಕಾಗಿ ಅನ್ನಪೂರ್ಣ, ಅಂತ್ಯೋದಯ ಅನ್ನ ಯೋಜನೆ ಮತ್ತು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ.

೬. ವಸತಿ ಯೋಜನೆಗಳು: ಬಡತನದ ರೇಖೆಗಿಂತ ಕೆಳಗಿನವರಿಗಾಗಿ ಸಹಾಯಕ ಗ್ರಾಮೀಣ ವಸತಿ ಯೋಜನೆಯಾದ ಇಂದಿರಾ ಅವಾಸ್ ಯೋಜನೆ ಹಾಗೂ ಆರ್ಥಿಕವಾಗಿ ದುರ್ಬಲರಿಗೆ ಯೋಜನೆಗಳಿದ್ದು ಅವು ಗ್ರಾಮೀಣ ಬಡವರಿಗೆ ವಸತಿಯನ್ನು ಒದಗಿಸುತ್ತದೆ.

೭. ಪ್ರೊವಿಡೆಂಟ್ ಫಂಡ್ ಯೋಜನೆ (ಮಿತವ್ಯಯ ನಿಧಿ ಯೋಜನೆ) : ಉದಾಹರಣೆಗೆ ಪಶ್ಚಿಮ ಬಂಗಾಳದ ಸರ್ಕಾರ ರೂಪಿಸಿರುವ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗಾಗಿ ಪ್ರೊವಿಡೆಂಟ್ ಫಂಡ್‌ನ ರಾಜ್ಯದ ನೆರವಿನ ಯೋಜನೆ.

೮. ಅಸಂಘಟಿತ ಕಾರ್ಮಿಕರ ಸಾಮಾಜಿಕ ಯೋಗಕ್ಷೇಮ ಯೋಜನೆ : ಮೂರು ಮೂಲಭೂತ ಅವಶ್ಯಕತೆಗಳಾದ ನಿವೃತ್ತಿ, ವ್ಯಕ್ತಿಗತ ಅಪಘಾತ ವಿಮೆ, ವೈದ್ಯಕೀಯ ವಿಮೆ ಇವುಗಳನ್ನು ಉದ್ದೇಶದಲ್ಲಿ ಇಟ್ಟುಕೊಂಡು ಅಸಂಘಟಿತ ಕಾರ್ಮಿಕರು ಹಾಗೂ ಅವರ ಕುಟುಂಬದವರು ಇದರ ಪ್ರಯೋಜನ ಪಡೆಯುವಂತೆ ೨೦೦೪ರಲ್ಲಿ ಈ ಯೋಜನೆಯನ್ನು ಆರಂಭಿಸಲಾಯಿತು.

೯. ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ : ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗಾಗಿ ಈ ಯೋಜನೆ ಇದ್ದು ಬಡ ಕುಟುಂಬಕ್ಕೆ ವೃದ್ಧಾಪ್ಯ, ಮನೆಯಲ್ಲಿ ಮುಖ್ಯವಾಗಿ ದುಡಿಯುವ ವ್ಯಕ್ತಿಯ ಸಾವು, ಹೆರಿಗೆ ಮೊದಲಾದ ಸನ್ನಿವೇಶದಲ್ಲಿ ಈ ಸಾಮಾಜಿಕ ನೆರವುಗಳನ್ನು ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ (ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ) ರಾಷ್ಟ್ರೀಯ ಕುಟುಂಬ ಭತ್ಯೆ ಸವಲತ್ತು ಯೋಜನೆ ಹಾಗೂ ರಾಷ್ಟ್ರೀಯ ಹೆರಿಗೆ ಭತ್ಯೆ + ಸವಲತ್ತು ಯೋಜನೆಯ ಮೂಲಕ ನೀಡಲಾಗುತ್ತದೆ.

೧೦. ಯೋಗಕ್ಷೇಮ ನಿಧಿ : ಇದರಲ್ಲಿ ವೈದ್ಯಕೀಯ ನೆರವು, ಮಕ್ಕಳ ಶಿಕ್ಷಣಕ್ಕಾಗಿ ನೆರವು, ವಸತಿ ಹಾಗೂ ನೀರಿನ ಪೂರೈಕೆ, ಮನರಂಜನಾ ಸೌಲಭ್ಯಗಳನ್ನು ನೀಡಲಾಗುತ್ತದೆ. ಗಣಿ ಕಾರ್ಮಿಕರಿಗಾಗಿ ರೂಪಿಸಿದ ನಿಧಿಗಳೆಂದರೆ ಸುಣ್ಣದ ಕಲ್ಲು ಹಾಗೂ ಡೊಲೋಮೈಟ್ ಗಣಿ ಕಾರ್ಮಿಕ ಯೋಗಕ್ಷೇಮ ಕಾಯಿದೆ ೧೯೭೨, ಕಬ್ಬಿಣದ ಅದಿರು, ಮ್ಯಾಂಗನೀಸ್ ಅದಿರು, ಕ್ರೋಮ್ ಗಣಿ ಕಾರ್ಮಿಕರ ಯೋಗಕ್ಷೇಮ ನಿಧಿ ಕಾಯಿದೆ ೧೯೭೬, ಹಾಗೂ ಅಬ್ರಕ ಗಣಿ ಕಾಯಿದೆ ಯೋಗಕ್ಷೇಮ ನಿಧಿ ಕಾಯಿದೆ ೧೯೪೬.

೧೧. ರಾಷ್ಟ್ರೀಯ ಸಾಮಾಜಿಕ ಭದ್ರತೆ ನಿಧಿ : ಇದು ಅಸಂಘಟಿತ ಕಾರ್ಮಿಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಆರಂಭದಲ್ಲಿ ರೂ. ೧,೦೦೦/- ಕೋಟಿ ಮೀಸಲಾಗಿಟ್ಟು ಈ ಯೋಜನೆಯನ್ನು ಆರಂಭಿಸಲಾಯಿತು.

**ಮಹಿಳಾ ಸಬಲೀಕರಣ ಯೋಜನೆ / ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು**

- ಸ್ವಸಹಾಯ ಗುಂಪಿನ ಮೂಲಕ ಮಹಿಳೆಯರ ಸಂಪೂರ್ಣ ಸಬಲೀಕರಣಕ್ಕಾಗಿ ಸ್ವಯಂಸಿದ್ಧ.
- ಮಹಿಳೆಯರಲ್ಲಿ ಸ್ವ-ಉದ್ಯೋಗ ಅವಕಾಶವನ್ನು ಉತ್ತೇಜಿಸಲು ಹಾಗೂ ಅಸಂಘಟಿತ ಕ್ಷೇತ್ರದಿಂದ ಬಂದ ಕಡು ಬಡವ ಮಹಿಳೆಯರನ್ನು ಉದ್ದೇಶದಲ್ಲಿ ಇಟ್ಟುಕೊಂಡು ರಾಷ್ಟ್ರೀಯ ಮಹಿಳಾ ಕೋಶ ಅಥವಾ ರಾಷ್ಟ್ರೀಯ ಸಾಲ ನಿಧಿ.
- ಪ್ರಾಥಮಿಕ ಅಗತ್ಯಗಳಾದ ವಸತಿ, ಆಹಾರ, ಬಟ್ಟೆ, ಭಾವನಾತ್ಮಕ ಬೆಂಬಲ ಹಾಗೂ ಆಪ್ತ ಸಮಾಲೋಚನೆ, ವಿಧವೆಯರಿಗೆ ಪುನರ್ವಸತಿ ಬೆಂಬಲ ಇವುಗಳನ್ನು ನೀಡಲು ಸ್ವಧಾರ ಯೋಜನೆ.
- ಮಹಿಳಾ ಕೂಲಿ ಕಾರ್ಮಿಕರನ್ನು, ಸಂಬಳ ನೀಡಲ್ಪಡದ ದಿನಗೂಲಿಗಳನ್ನು, ಮನೆ ಜವಾಬ್ದಾರಿ ಹೊತ್ತ ಗೃಹಿಣಿಯರು, ವಲಸೆ ಕಾರ್ಮಿಕರು ಹಾಗೂ ಬುಡಕಟ್ಟು ಹಾಗೂ ಆಸ್ತಿ ಕಸಿದುಕೊಳ್ಳಲ್ಪಟ್ಟ ಗುಂಪು ಇವರನ್ನು ಅನ್ಯಾಯದ ವಿರುದ್ಧ ದನಿ ಎತ್ತಲು ಸನ್ನದ್ಧರನ್ನಾಗಿಸಲು ಬೆಂಬಲಿಸುವ ತರಬೇತಿ ಉದ್ಯೋಗ ಕಾರ್ಯಕ್ರಮ. ಇಲ್ಲಿ ಇವರನ್ನು ಸಣ್ಣ ಗುಂಪುಗಳಾಗಿ ಮಾಡಿ ಅವರಿಗೆ ಸಾಲ ದೊರಕುವಂತೆ ಮಾಡುವ ಮೂಲಕ, ಕೌಶಲ್ಯ ಹೆಚ್ಚಳದ ತರಬೇತಿಯ ಮೂಲಕ, ಉದ್ಯೋಗದ ಜೊತೆ ಆದಾಯ ಹುಟ್ಟುವಂತಹ ಕಾರ್ಯಕ್ರಮ ಹಾಕಿಕೊಳ್ಳುವ ಮೂಲಕ ಹಾಗೂ ಮಹಿಳೆಯರಿಗಾಗಿ ಉದ್ಯೋಗದ ಸ್ಥಿತಿಯಲ್ಲಿ ಹಾಗೂ ಇನ್ನೂ ಹೆಚ್ಚಿನ ಪ್ರಗತಿಯನ್ನು ಸೇವೆಯಲ್ಲಿ ಕಾಣಲು ಬೇಕಾದ ತರಬೇತಿ ಮೊದಲಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.
- ಹದಿಹರೆಯದ ಹೆಣ್ಣುಮಕ್ಕಳಿಗಾಗಿ 'ಕಿಶೋರಿ ಶಕ್ತಿ

ಯೋಜನಾ' ಎನ್ನುವ ಯೋಜನೆ ಇದೆ. ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಪೌಷ್ಟಿಕತೆ, ಆರೋಗ್ಯ ಸುಧಾರಣೆ, ಆರೋಗ್ಯ, ಸ್ವಚ್ಛತೆ, ಪೌಷ್ಟಿಕತೆ, ಕುಟುಂಬದ ಯೋಗಕ್ಷೇಮದ ಬಗ್ಗೆ ಅರಿವು ಮೂಡಿಸುವ ಹಾಗೂ ಅವರಲ್ಲಿ ಜೀವನ ಕೌಶಲ್ಯದ ಕಲಿಕೆಗೆ ಅವಕಾಶ ಒದಗಿಸುವ ಹಾಗೂ ಶಾಲೆಗೆ ಹಿಂತಿರುಗುವ ಆಸಕ್ತಿ ಮೂಡಿಸುವ ಕಾರ್ಯಕ್ರಮವನ್ನು ಈ ಯೋಜನೆಯಡಿ ಹಮ್ಮಿಕೊಳ್ಳಲಾಗುವುದು.

ಈ ಮೇಲೆ ನೀಡಿದ ಯೋಜನೆಗಳಲ್ಲದೆ, ಇನ್ನೂ ಅನೇಕ ಯೋಜನೆಗಳು ರಾಜ್ಯ ಮಟ್ಟದಲ್ಲಿದ್ದು ಮಹಿಳೆಯರು ಮಹಿಳಾ ಕಾರ್ಮಿಕರು, ಗರ್ಭಿಣಿ ಮಹಿಳೆಯರು, ವಿಧವೆಯರು, ಹೊರದೂಡಲ್ಪಟ್ಟ ಮಹಿಳೆಯರು, ಹದಿಹರೆಯದ ಹೆಣ್ಣುಮಕ್ಕಳು ಹಾಗೂ ಹೆಣ್ಣು ಮಗು ಇವರನ್ನೆಲ್ಲ ದೃಷ್ಟಿಯಲ್ಲಿ ಇಟ್ಟುಕೊಂಡು ಯೋಜನೆಗಳಿವೆ. ಮಹಿಳಾ ಗಣಿ ಕಾರ್ಮಿಕರ ಸಮಸ್ಯೆಗಳ ಮೇಲೆ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳು ರಾಜ್ಯ ಮಟ್ಟದಲ್ಲಿ ಈ ಮಾಹಿತಿಗಳನ್ನು ಸಂಗ್ರಹಿಸಿದೆ ಎನ್ನುವುದು ಮುಖ್ಯ ಅಂಶವಾಗಿದೆ.

**ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ ೨೦೦೮**

ಈ ಕಾಯಿದೆಯು ಅಸಂಘಟಿತ ಕಾರ್ಮಿಕರ ಭದ್ರತೆಗಾಗಿ ಇತ್ತೀಚಿಗೆ ತಂದ ರಕ್ಷಣಾತ್ಮಕ ಕಾಯಿದೆಯಾಗಿದೆ. ಈ ಕಾಯಿದೆಯಡಿಯಲ್ಲಿ ಕೇಂದ್ರ ಸರ್ಕಾರವು

ಅ) ಜೀವ ಮತ್ತು ವಿಕಲ ಚೇತನಕ್ಕೆ

ಬ) ಆರೋಗ್ಯ ಮತ್ತು ಹೆರಿಗೆ ಭತ್ಯೆ ಹಾಗೂ ಸವಲತ್ತುಗಳು

ಕ) ವೃದ್ಧಾಪ್ಯಕ್ಕೆ ರಕ್ಷಣೆ

ಡ) ಇನ್ನುಳಿದ ಸವಲತ್ತುಗಳು

ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಅಸಂಘಟಿತ ಕಾರ್ಮಿಕರಿಗಾಗಿ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ತರಲು ಇಚ್ಛಿಸಿದೆ. ಈ ಕಾಯಿದೆಯ ಪ್ರಕಾರ ಕ್ಷೇಮಾಭಿವೃದ್ಧಿ ಯೋಜನೆಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ.

೧) ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ

೨) ರಾಷ್ಟ್ರೀಯ ಕೌಟುಂಬಿಕ ಸವಲತ್ತು ಯೋಜನೆ

೩) ಜನನಿ ಸುರಕ್ಷಾ ಯೋಜನೆ

೪) ಕೈಮಗ್ಗ ನೇಕಾರರ ಸಮಗ್ರ ಕ್ಷೇಮಾಭಿವೃದ್ಧಿ ಯೋಜನೆ

೫) ಕರಕುಶಲ ಕಲಾಕಾರರ ಸಮಗ್ರ ಕ್ಷೇಮಾಭಿವೃದ್ಧಿ ಯೋಜನೆ

೬) ಕರಕುಶಲ ಪಾರಂಗತರಿಗೆ ನಿವೃತ್ತಿ ವೇತನ

೭) ಮೀನುಗಾರರು ಹಾಗೂ ತರಬೇತಿ ಮತ್ತು ವಿಸ್ತರಣೆಗಾಗಿ ರಾಷ್ಟ್ರೀಯ ಯೋಜನೆ

೮) ಜನಶ್ರೀ ವಿಮಾ ಯೋಜನೆ

೯) ಆಮ್ ಆದ್ಮಿ ವಿಮಾ ಯೋಜನೆ

೧೦) ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆ

**ಕಾರ್ಮಿಕರು ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಆಡಳಿತ ಸಂಸ್ಥೆಗಳು**

**ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ**

ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ, ಈ ಸಚಿವಾಲಯದ ಪ್ರಥಮ ಜವಾಬ್ದಾರಿಯೆಂದರೆ, ಸರ್ವೆಸಾಮಾನ್ಯ ಹಾಗೂ ಬಡವರೆಂದು ಪರಿಗಣಿಸಲ್ಪಟ್ಟ ಭೂಮಿ, ಆಸ್ತಿಪಾಸ್ತಿ ಕಸಿದುಕೊಳ್ಳಲ್ಪಟ್ಟ, ಪ್ರತಿಕೂಲ ಪರಿಸ್ಥಿತಿಯಲ್ಲಿ ಬದುಕುವಂತಹ ಜನರು ನಮ್ಮ ಸಮಾಜದಲ್ಲಿ ಇರುತ್ತಾರೆ. ಅಂತವರ ಹಿತಾಸಕ್ತಿ ಹಾಗೂ ಸುರಕ್ಷತೆಯನ್ನು ನೋಡಿಕೊಳ್ಳುವ ಜವಾಬ್ದಾರಿ ಸಚಿವಾಲಯದ್ದಾಗಿರುತ್ತದೆ. ಕೇಂದ್ರ ಮಟ್ಟದಲ್ಲಿ ಸಚಿವಾಲಯವು ಅದರ ಕೈಕೆಳಗಿನ ಅಧಿಕಾರಿಗಳ ಜೊತೆ ಸೇರಿ ಕಾರ್ಮಿಕರಿಗಾಗಿ ಕಾಯಿದೆ ರೂಪಿಸುವ, ಗಣಿಗಳಲ್ಲಿ ಸುರಕ್ಷತೆಯನ್ನು ನೋಡಿಕೊಳ್ಳುವ ವೃತ್ತಿ ಸಂಬಂಧಿತ ತಾಂತ್ರಿಕ ಅಂಶಗಳ ಆರೋಗ್ಯ ಹಾಗೂ ಸುರಕ್ಷತೆಯ ಕಾಳಜಿಯನ್ನು ವಹಿಸುವ ಹಾಗೂ ಗಣಿಗಳಲ್ಲಿ (ಕಲ್ಲಿದ್ದಲು ಗಣಿ ಹೊರತಾಗಿ) ಸುರಕ್ಷತೆ ಹಾಗೂ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಕಾನೂನಿನ ಆಡಳಿತ ನಿರ್ವಹಿಸುವುದು ಇವೆಲ್ಲ ಕಾರ್ಯವನ್ನು ನಿರ್ವಹಿಸುತ್ತದೆ.

ಕೇಂದ್ರದಲ್ಲಿ ಸಚಿವಾಲಯ ಹಾಗೂ ರಾಜ್ಯದಲ್ಲಿ ಇಲಾಖಾ ಮಟ್ಟದಲ್ಲಿ ಕಾರ್ಮಿಕ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿಯಿದ್ದು, ಕಾರ್ಮಿಕರ ಸ್ಥಿತಿಗತಿಗಳು, ಪ್ರೊವಿಡೆಂಟ್ ಫಂಡ್ (ಆಪತ್ತು ನಿಧಿ) ನಿವೃತ್ತಿ ವೇತನ, ಗ್ರಾಜ್ಯುಯಿಟಿ ಮಾಲೀಕರ ಕರ್ತವ್ಯಗಳು, ಪರಿಹಾರ, ಆರೋಗ್ಯ ಮತ್ತು ಅನಾರೋಗ್ಯದ

ವಿಮೆ ಹಾಗೂ ಅಸಂಘಟಿತ, ಗುತ್ತಿಗೆ ಹಾಗೂ ವಲಸೆ ಕಾರ್ಮಿಕರನ್ನು ಒಳಗೊಂಡ ಕಾರ್ಮಿಕರ ನಿರುದ್ಯೋಗ ವಿಮೆ ಇವುಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ಇವುಗಳನ್ನು ಬೇರೆ ಬೇರೆ ಕಾಯಿದೆಗಳಾದ ಕನಿಷ್ಠ ಸಂಬಳ ಕಾಯಿದೆ ೧೯೪೮, ಉದ್ಯೋಗಿಗಳ ರಾಜ್ಯ ವಿಮಾ ಕಾಯಿದೆ ೧೯೪೮, ಉದ್ಯೋಗಿಗಳ ಆಪತ್ತು ನಿಧಿ (ಪ್ರೊವಿಡೆಂಟ್ ಫಂಡ್) ಹಾಗೂ ಇತರೆ ಸವಲತ್ತುಗಳ ಕಾಯಿದೆ ೧೯೫೨, ಭಕ್ಷಿಸು ಸಂಬಳ (ಪೇಮೆಂಟ್ ಆಫ್ ಗ್ರಾಚ್ಯುಯಿಟಿ) ಕಾಯಿದೆ ೧೯೭೨, ಹೆರಿಗೆ ಭತ್ಯೆ ಹಾಗೂ ಸವಲತ್ತು ಕಾಯಿದೆ ೧೯೬೧, ಕಾರ್ಮಿಕ ಪರಿಹಾರ ಕಾಯಿದೆ ೧೯೨೩ ಹಾಗೂ ಸಮಾನ ಸಂಬಳ ಕಾಯಿದೆ ೧೯೭೬ ಇದರ ಜಾರಿಗೊಳಿಸುವಿಕೆಯ ಮೂಲಕ ಈ ಜವಾಬ್ದಾರಿಗಳನ್ನು ನಿರ್ವಹಿಸಲಾಗುತ್ತದೆ. ಈ ಸಚಿವಾಲಯವು ಕೆಲವು ಗಣಿಗಳನ್ನು ಒಳಗೊಂಡು ಕಾರ್ಮಿಕ ನಿಧಿಯ ನಿರ್ವಹಣೆಯ ಆಶ್ವಾಸನೆಯನ್ನು ನೀಡುತ್ತದೆ.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು, ಮಹಿಳೆಯರ ಉದ್ಯೋಗವನ್ನು ಒಳಗೊಂಡು ಮಹಿಳೆಯರ ಅಗತ್ಯ ಅಭಿವೃದ್ಧಿ ಹಾಗೂ ಎಲ್ಲ ಸಂಗತಿಗಳಿಗೂ ನೋಡಲ್ ಇಲಾಖೆಯಾಗಿದೆ. ಈ ಸಚಿವಾಲಯವು ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಸ್ವಯಂ ಸೇವಾ ಸಂಸ್ಥೆಗಳ ಹಾಗೂ ಸರಕಾರದ ಪ್ರಯತ್ನಗಳಿಗೆ ಮಾರ್ಗದರ್ಶನ ಹಾಗೂ ಸಹಯೋಗ ನೀಡುವುದಲ್ಲದೆ, ಸರಕಾರದ ಹಾಗೂ ಸರಕಾರೇತರ ಸಂಸ್ಥೆಗಳ ಸಂಶೋಧನಾತ್ಮಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಕಾರ್ಯ ಮಾಡುತ್ತದೆ. ಈ ಕಾರ್ಯಕ್ರಮಗಳು ಸೇವೆ, ಉದ್ಯೋಗ ತರಬೇತಿ, ಆದಾಯ ಮೂಲ ಹುಡುಕುವುದು, ಅರಿವು ಮೂಡಿಸುವ ಹಾಗೂ ಲಿಂಗ ಸಂವೇದನೆಯಂತಹ ವಿಚಾರವನ್ನು ಒಳಗೊಂಡು ಅವುಗಳನ್ನು ಬೆಂಬಲಿಸುವುದಾಗಿರುತ್ತದೆ. ಈ ಕಾರ್ಯಕ್ರಮಗಳು ಆರೋಗ್ಯ, ಶಿಕ್ಷಣ, ಗ್ರಾಮೀಣ ಅಭಿವೃದ್ಧಿಯೇ ಮೊದಲಾದ ಕ್ಷೇತ್ರಗಳಲ್ಲಿನ ಉಳಿದ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪೂರಕ ಹಾಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ.

## ರಾಷ್ಟ್ರೀಯ ಮಹಿಳಾ ಆಯೋಗ

ರಾಷ್ಟ್ರೀಯ ಮಹಿಳಾ ಆಯೋಗವು ರಾಷ್ಟ್ರಮಟ್ಟದ ಸಹಾಯಕ ಸಂಘಟನೆಯಾಗಿದ್ದು ಮಹಿಳೆಯರ ಹಿತಾಸಕ್ತಿಗಳನ್ನು ಕಾಯುವ ಹಾಗೂ ಉತ್ತೇಜಿಸುವ ಹೊಣೆ ಹೊತ್ತಿದೆ. ಇದು ಮಹಿಳೆಯರ ಸಾಂವಿಧಾನಿಕ ಹಾಗೂ ಕಾನೂನಾತ್ಮಕ ಸುರಕ್ಷತೆಯನ್ನು ನೋಡುಕೊಳ್ಳುವುದಲ್ಲದೆ ಕಾನೂನು ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡುವುದು. ದೂರು ಪರಿಹಾರಕ್ಕೆ ನೆರವು ನೀಡುವುದು, ಮಹಿಳೆಯರ ಮೇಲೆ ಪರಿಣಾಮ ಬೀರುವಂತಹ ಎಲ್ಲ ನೀತಿಯ ಮೇಲೆ ಸರಕಾರಕ್ಕೆ ಸಲಹೆ ನೀಡುವುದು ಇವೆಲ್ಲ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ.

## ಮಹಿಳಾ ಗಣಿ ಕಾರ್ಮಿಕರ ಹಕ್ಕು ಸಂರಕ್ಷಣೆಗಾಗಿ ಶಿಫಾರಸ್ಸುಗಳು

ಈವರೆಗೆ ನಾವು ಸಾಕಷ್ಟು ಕಾನೂನು ಯೋಜನೆಗಳ ಬಗ್ಗೆ ಚರ್ಚಿಸಿದ್ದೇವೆ. ಈ ಎಲ್ಲ ಕಾನೂನುಗಳಾಗಲಿ, ಯೋಜನೆಗಳಾಗಲಿ ಜಾರಿಗೊಳ್ಳಲ್ಪಡುವಲ್ಲಿ ಸಮಸ್ಯೆಯಿದೆ. ತಮ್ಮ ಪ್ರಗತಿಗಾಗಿ, ಯೋಗಕ್ಷೇಮಕ್ಕಾಗಿ ಇಷ್ಟೆಲ್ಲ ಯೋಜನೆಗಳು ತಮಗಾಗಿ ಇವೆ ಎಂದು ಗಣಿ ಕಾರ್ಮಿಕರು ಹಾಗೂ ಅವರ ಕುಟುಂಬಗಳಿಗೆ ತಿಳಿಯದೇ ಇರುವುದು ದುರದೃಷ್ಟಕರ. ಇದಲ್ಲದೆ ಕಾರ್ಮಿಕರಿಗೆ ಹಾಗೂ ಕಾರ್ಮಿಕರ ಹಿತರಕ್ಷಣೆಗೆ ನಿಂತವರಿಗೆ ಗಣಿಯೆಂದರೆ ಕಠಿಣ ಉದ್ಯಮವಾಗಿದ್ದು ಅಲ್ಲಿ ಮಾನವ ಹಕ್ಕುಗಳ ರಕ್ಷಣೆ ಕಷ್ಟ ಸಾಧ್ಯವೆನಿಸುತ್ತಿರುವುದು ಗಣಿ ಲಾಬಿಯ ತೋಳ್ಬಲ ಹಾಗೂ ಗೂಂಡಾಗಿರಿ ಭೂಗತದೊರೆಗಳ ಹಿಡಿತಗಳೇ ಕಾರಣವಾಗಿದೆ. ಅಸಂಘಟಿತ ಕ್ಷೇತ್ರದಲ್ಲಿ ಗಣಿಗಾರಿಕಾ ವಿಭಾಗವೊಂದೇ ಅನಕ್ಷರಸ್ಥ ಮಹಿಳೆಗೆ ದೊಡ್ಡ ಮಟ್ಟದ ಉದ್ಯೋಗ ಅವಕಾಶ ಒದಗಿಸುವ ವಿಭಾಗವಾಗಿದ್ದು ಇಲ್ಲಿ ಅವರ ಕೆಲಸದ ಸ್ಥಿತಿಯನ್ನೂ ಜೀವನಾಧಾರ ಸ್ಥಿತಿಯನ್ನೂ ಸುಧಾರಿಸಿಕೊಳ್ಳಲು ಅವಕಾಶಗಳು ಶೂನ್ಯವಾಗಿದೆ. ಇಷ್ಟಲ್ಲದೆ ಗಣಿ ಕಂಪನಿಯ ಹಾಜರಾತಿ ದಾಖಲೆಗಳಲ್ಲಿ, ಕಾರ್ಮಿಕ ಗಣತಿ ದಾಖಲಾತಿಗಳಲ್ಲಿ, ಕಾರ್ಮಿಕ ಸಂಘದ ಸದಸ್ಯತ್ವದಲ್ಲಿ ಅಥವಾ ಇನ್ನಾವುದೇ ವಿಧದ ದಾಖಲಾತಿಗಳಲ್ಲಿ ಮಹಿಳಾ ಕಾರ್ಮಿಕರನ್ನು ಗುರುತಿಸುವುದೇ ಇಲ್ಲ; ಹೀಗಾಗಿ ಮಹಿಳಾ ಕಾರ್ಮಿಕರ ಅಸ್ತಿತ್ವವೇ ಗಣಿಯಲ್ಲಿ ಇರುವುದಿಲ್ಲ ಎನ್ನುವ ದುಃಖಕರವಾದ ಸಂಗತಿ ವಾಸ್ತವ ಸತ್ಯವಾಗಿದೆ. ಇದು ಗಣಿಗಾರಿಕೆ ಕ್ಷೇತ್ರದಲ್ಲಿ ಮಹಿಳಾ ಕಾರ್ಮಿಕರ ನಿಜವಾದ ಸ್ಥಿತಿಗತಿಗಳನ್ನು ಮರೆಮಾಚಲು, ಅಧಿಕೃತವಾಗಿ ಅಲ್ಲಗಳೆಯಲು ಕಾರಣವಾಗಿ ಮಹಿಳಾ ಕಾರ್ಮಿಕರ ಸಮಸ್ಯೆಗೆ ಇನ್ನಷ್ಟು ಸಮಸ್ಯೆಯನ್ನು ಸೇರಿಸುತ್ತದೆ. ಲಿಂಗ ದೃಷ್ಟಿಯಿಂದ ಗಣಿಕ್ಷೇತ್ರವು ಮಹಿಳೆಯರಿಗೆ ಸಮಾನ ಅವಕಾಶವನ್ನು ಒದಗಿಸಲು ವಿಫಲವಾಗಿದ್ದರೂ ಮಹಿಳಾ ಕಾರ್ಮಿಕರ ಶೋಷಣೆ ಅಲ್ಲಿ ಹೆಚ್ಚಿನ ಮಟ್ಟದಲ್ಲಿ ಇದೆ ಎನ್ನುವುದು ಕಣ್ಣಿಗೆ ಕಾಣುವ ಸತ್ಯವಾಗಿದೆ.

ಇವೆಲ್ಲ ಕಾರಣಗಳಿಂದಾಗಿ ಆದಷ್ಟು ಶೀಘ್ರವಾಗಿ ತರಬೇತಿಗಾಗಿ, ಕೆಲಸದಲ್ಲಿ ಸೌಕರ್ಯ ಸೌಲಭ್ಯಗಳಿಗಾಗಿ ಸುರಕ್ಷತಾ ಪರಿಕರಗಳಿಗಾಗಿ ಹಾಗೂ ಕೆಲಸದಲ್ಲಿ ಉತ್ತಮ ಸ್ಥಿತಿಗತಿಗಳಿಗಾಗಿ ಬೇಡಿಕೆ ಇಡಲೇಬೇಕಾಗಿದೆ. ಮಹಿಳಾ ಗಣಿ ಕಾರ್ಮಿಕರು ಹಾಗೂ ಅವರ ಬೇಡಿಕೆ ಇಡಲೇಬೇಕಾಗಿದೆ. ಮಹಿಳಾ ಉದ್ಯೋಗಗಳು ಗಣಿಯಲ್ಲಿ ದೊರಕಲೇಬೇಕಾದ ಸನ್ನಿವೇಶವಿದೆ.

ಕಾಯಿದೆಗಳು ಹಲ್ಲಿಲ್ಲದಂತಾಗಿ ಯೋಜನೆಗಳನ್ನಷ್ಟೇ ಪ್ರಕಟಿಸುವ ಯಂತ್ರಗಳಾಗದೆ ಮಹಿಳಾ ಗಣಿ ಕಾರ್ಮಿಕರ ಪರವಾಗಿ ಇನ್ನಷ್ಟು ಬಲಗೊಳ್ಳುವ ತುರ್ತು ಅಗತ್ಯವಿದೆ. ಮಹಿಳಾ ಕಾರ್ಮಿಕರು ಸುರಕ್ಷಿತವಾಗಿದ್ದಾರೆ ಎನ್ನುವ ಭರವಸೆಗಾಗಿ ಕೆಲವು ನೀತಿಗಳು ಹಾಗೂ ಕಾನೂನು ಸವಲತ್ತುಗಳು, ನಿಯಮ ಹಾಗೂ ಗುಣಮಟ್ಟಗಳೊಡನೆ ಕಾನೂನಿನ ಭದ್ರತೆಯೊಳಗೊಂಡು ಇನ್ನಷ್ಟು ವಿಸ್ತಾರಗೊಳ್ಳಬೇಕಾಗಿದೆ.

ಇವುಗಳು ಈ ಕೆಳಗಿನ ಶಿಫಾರಸ್ಸುಗಳನ್ನು ಒಳಗೊಂಡಿದೆ :

೧. ಕಾರ್ಮಿಕರ ಗಣತಿಯಲ್ಲಿ ಹಾಗೂ ಇನ್ನುಳಿದ ಅಧಿಕೃತ ಸಮೀಕ್ಷೆಯಲ್ಲಿ ಕಾರ್ಮಿಕರನ್ನು ಸೇರಿಸುವ ಬಗ್ಗೆ ಗಂಭೀರ ಕ್ರಮಗಳಾಗಬೇಕು.

೨. ೨೦೦೮ರ ರಾಷ್ಟ್ರೀಯ ಗಣಿ ನೀತಿಯು ಬಂಡವಾಳ ಸರಕು, ಮೂಲಭೂತ ಸೌಕರ್ಯ, ಉದ್ದಿಮೆ ಇವುಗಳಿಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದಷ್ಟಕ್ಕೇ ತನ್ನ ಗುರಿ ಅಲ್ಲ, ಬದಲಿಗೆ ಪರಿಸರ ಮತ್ತು ಸಮುದಾಯದ ಸುಸ್ಥಿರ ಅಭಿವೃದ್ಧಿಯೂ ತನ್ನ ಗುರಿ ಎಂದು ಹೇಳುತ್ತದಾದರೂ ಉದ್ದಿಮೆಗಳು ಕಾರ್ಮಿಕರಿಗೆ ಹೇಗೆ ಸುಸ್ಥಿರವಾದ ಜೀವನೋಪಾಯ ಕೊಡಬಹುದು ಎಂಬ ಬಗ್ಗೆ ಯಾವುದೇ ರೀತಿಯಲ್ಲಿ ಸ್ಪಷ್ಟವಾಗಿ ಏನೂ ಹೇಳಿಲ್ಲ. ಇನ್ನೂ ವಿಷಾದಕರ ಸಂಗತಿಯೆಂದರೆ ಖನಿಜವನ್ನು ಹೊರತೆಗೆಯುವುದರಲ್ಲಿ ದಕ್ಷತೆಯ ಬಗ್ಗೆ ಮಾತನಾಡಲಾಗುತ್ತದೆ. ಆದರೆ ಅದು ಖನಿಜವನ್ನು ಸಂಸ್ಕರಿಸುವ ಹಾಗೂ ಬಂಡವಾಳದ ಸಾಮರ್ಥ್ಯವನ್ನು ಹೆಚ್ಚಿಸುವ ಕೈಗಾರಿಕೆಯ ದೃಷ್ಟಿಕೋನದಿಂದಲೇ ವಿನಃ, ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯವನ್ನಾಗಲಿ, ಬದುಕನ್ನಾಗಲಿ ಸುಧಾರಿಸುವ ದೃಷ್ಟಿಕೋನ ಅಲ್ಲಿ ನಮಗೆ ಕಾಣಬರುವುದಿಲ್ಲ. ಒಟ್ಟಾರೆ ಉದ್ಯೋಗ ಕ್ಷೇತ್ರಕ್ಕೆ ಗಣಿ ಕ್ಷೇತ್ರದ ಕೊಡುಗೆ ತೀರಾ ಅಲ್ಪವೇ ಎನ್ನಬಹುದಾಗಿದೆ. ಮಹಿಳೆಯರನ್ನೇ ದೃಷ್ಟಿಕೋನದಲ್ಲಿ ಇಟ್ಟುಕೊಂಡು ನೋಡಿದರೆ, ಈ ಕ್ಷೇತ್ರದ ಉದ್ಯೋಗ ನೀಡುವ ಸಾಮರ್ಥ್ಯವನ್ನು ಪುನರಾವಲೋಕನ ಮಾಡದ ಹೊರತು, ಉದ್ಯೋಗದ ಆರ್ಥಿಕತೆಯ ದೃಷ್ಟಿಯಿಂದ ಗಣಿಕ್ಷೇತ್ರದ ಪೋಷಣಾ ಸಾಮರ್ಥ್ಯವು ಪ್ರಶ್ನಾರ್ಹವೇ ಆಗಿದೆ. ಅರ್ಥಾತ್ ಈ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರು, ಅದರಲ್ಲೂ ಮಹಿಳಾ ಕಾರ್ಮಿಕರು ದಿನವಿಡೀ ದುಡಿದರೂ ಒಂದು ಉತ್ತಮ ಬದುಕನ್ನು ಬದುಕಲು ಸಾಧ್ಯವೇ ಎನ್ನುವ ಪ್ರಶ್ನೆ ಎದುರಾಗುವುದು ಸಹಜವೇ ಆಗಿದೆ. ದುಡಿಯುವುದು ಯಾಕೆ? ಅನ್ನ, ವಸನ, ವಸತಿಗಾಗಿ, ಉತ್ತಮ ಬದುಕಿಗಾಗಿ. ಅದೇ ದೊರಕದೇ ಹೋದರೆ ಇನ್ಯಾತಕ್ಕೆ ದುಡಿಯಬೇಕು? ಇವೆಲ್ಲ ಕಾರಣಗಳಿಗಾಗಿ ರಾಷ್ಟ್ರೀಯ ಖನಿಜ ನೀತಿ ೨೦೦೮, ಇದನ್ನು ಪುನಃ ಪರಿಶೀಲಿಸಿ ಪುನರ್ ರೂಪಿಸಬೇಕು. ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಬದುಕಿನ ಗುಣಮಟ್ಟ ಉತ್ತಮಗೊಳ್ಳುವ ನೀತಿಯನ್ನು ಅಲ್ಲಿ ಅಳವಡಿಸಬೇಕು. ಮಹಿಳಾ ಕಾರ್ಮಿಕರು ಖಾಸಗೀಕರಣ, ಯಾಂತ್ರೀಕರಣ ಹಾಗೂ ಕಾರ್ಮಿಕರನ್ನು ಕಡಿಮೆಗೊಳಿಸುವ ಪ್ರಕ್ರಿಯೆಯಲ್ಲಿ ಮೊದಲ ಬಲಿಗಳಾಗುತ್ತಾರೆ. ಮೊದಲು ಮಹಿಳಾ ಕಾರ್ಮಿಕರೇ ಗಣಿ ಕೆಲಸದಿಂದ ಹೊರದೂಡಲ್ಪಡುತ್ತಾರೆ. ಹಾಗಾಗಿ ಖಾಸಗೀಕರಣ, ಯಾಂತ್ರೀಕರಣ, ಕಾರ್ಮಿಕರನ್ನು ಕಡಿಮೆಗೊಳಿಸುವ ಪ್ರಕ್ರಿಯೆಯನ್ನು ಪರಿಶೀಲಿಸಿ ತಹಬಂದಿಗೆ ತರಬೇಕು. ಗಣಿ ಕಂಪನಿಗಳಿಗೆ ಎಲ್ಲ ಮಟ್ಟದಲ್ಲೂ ಹಾಗೂ ಗಣಿ ಚಟುವಟಿಕೆಯ ಎಲ್ಲ ಕೋನದಲ್ಲೂ ಲಿಂಗ ಸಮಾನತೆಯನ್ನು ಕಾಪಾಡುವುದನ್ನು ಕಡ್ಡಾಯಗೊಳಿಸುವ ನೀತಿ ಜಾರಿಗೊಳಿಸಬೇಕು. ಇದರ ಜೊತೆಗೆ ಗಣಿ ಕಂಪನಿಗಳಲ್ಲಿ ಕೇವಲ ಕೆಳಮಟ್ಟದಲ್ಲಿ ಅಲ್ಲದೇ ಎಲ್ಲ ಮಟ್ಟದಲ್ಲೂ, ಶೇ. ೩೦ರಷ್ಟಾದರೂ ಮಹಿಳೆಯರನ್ನು ನೇಮಿಸಿಕೊಳ್ಳುವಂತೆ ನೀತಿಯ ಮೂಲಕ ಒತ್ತಾಯ ಮಾಡಬೇಕು.

೩. ಬಹಳಷ್ಟು ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳು ಗಣಿ ಒಳಗಡೆ ಕೆಲಸ ಮಾಡುವ ಕಾನೂನಾತ್ಮಕ ನಿಷೇಧವನ್ನು ಕೈಬಿಡಲಾಗಿದೆ. ಹಾಗಾಗಿ ನಮ್ಮಲ್ಲಿ ಕೂಡ ಈ ನಿಷೇಧವನ್ನು ಪುನಃ ಪರಿಶೀಲಿಸಬೇಕಾಗಿದೆ. ಇದರ ಬದಲಾಗಿ ಕೆಲಸ ಮಾಡುವ ಸ್ಥಳದ ಗುಣಮಟ್ಟ ಸುಧಾರಿಸುವ ಕ್ರಮ ಕೈಗೊಳ್ಳಬೇಕು. ಮಹಿಳಾ ಕಾರ್ಮಿಕರಿಗೆ ಕೆಲಸದಲ್ಲಿ ಸುರಕ್ಷತೆ

ಕಾಪಾಡಿಕೊಳ್ಳುವ ಬಗ್ಗೆ ತರಬೇತಿ ನೀಡಬೇಕು. ಉಪಕರಣ ದೊರಕಿಸಿಕೊಡಬೇಕು. ಹೊರತಾಗಿ ನಾವು ಈಗ ಅನುಸರಿಸುವ ಹಾಗೆ ಅವರನ್ನು ತಾಂತ್ರಿಕ ಹಾಗೂ ವೃತ್ತಿಪರ ಚಟುವಟಿಕೆಯಿಂದ ದೂರ ಇಡುವುದನ್ನು ನಿಲ್ಲಿಸಬೇಕು. ಇದರಿಂದ ಮಹಿಳಾ ಕಾರ್ಮಿಕರ ಅಗತ್ಯಕ್ಕನುಗುಣವಾಗಿ ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಅನುಕೂಲವಾಗುತ್ತದೆ.

೪. ಬಹುತೇಕ ಮಹಿಳಾ ಗಣಿ ಕಾರ್ಮಿಕರು ಅಸಂಘಟಿತ ಕ್ಷೇತ್ರದ ಹಾಗೂ ಅನೌಪಚಾರಿಕ ಕಾರ್ಮಿಕರಾಗಿದ್ದು ಅವರ ಒಳಿತಿನ ದೃಷ್ಟಿಯಿಂದ ಖಾಸಗೀಕರಣ, ನಿಯಂತ್ರಣ ಸಡಿಲಿಸುವಿಕೆ ಹಾಗೂ ಹಂಗಾಮಿ ಗಣಿ ಕಾರ್ಮಿಕರು ಇವುಗಳನ್ನು ಪುನರ್ ಪರಿಶೀಲಿಸಬೇಕು. ಮಹಿಳಾ ಗಣಿ ಕಾರ್ಮಿಕರು ಔಪಚಾರಿಕ ಕೂಲಿಯವರಲ್ಲದ ಕಾರಣ ಹಾಗೂ ಉದ್ಯೋಗ ಹಾಜರಾತಿ ದಾಖಲೆ ಪಟ್ಟಿಯಲ್ಲಿ ಅವರ ಹೆಸರೇ ಇರುವುದಿಲ್ಲವಾದ ಕಾರಣ ಈ ವ್ಯವಸ್ಥೆಯಡಿ ಗಣಿ ಮಾಲೀಕರು ಮಹಿಳಾ ಕಾರ್ಮಿಕರ ಯಾವುದೇ ವಿಚಾರಕ್ಕೂ ಜವಾಬ್ದಾರಿ ಹೊಂದುವುದಿಲ್ಲ ಹಾಗೂ ಸರ್ಕಾರವಾಗಲಿ, ಕೈಗಾರಿಕಾ ಉದ್ಯಮಿಗಳಾಗಲಿ ಮಹಿಳಾ ಕಾರ್ಮಿಕರ ಸುರಕ್ಷತೆ ಹಾಗೂ ಯೋಗಕ್ಷೇಮದ ಜವಾಬ್ದಾರಿ ಹೊಂದುವ ಅವಕಾಶವನ್ನೇ ಇದು ತಪ್ಪಿಸುತ್ತದೆ.

೫. ಕೇಂದ್ರ ಸರ್ಕಾರದಲ್ಲಿ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯು ಕಂದಾಯ ವಸೂಲಿ ಹಾಗೂ ಗಣಿಕ್ಷೇತ್ರ ಹಾಗೂ ತಮ್ಮ ಕಛೇರಿ ಮಟ್ಟದಲ್ಲಿ, ಯಾವುದಾದರೂ ವರದಿ ನೀಡಿದಾಗ ಅದಕ್ಕೆ ಕ್ರಮ ತೆಗೆದುಕೊಳ್ಳುವಷ್ಟು ಆಡಳಿತಾತ್ಮಕ ಸಾಮರ್ಥ್ಯ ಹೊಂದಿರಬೇಕು. ಗಣಿ ಗುತ್ತಿಗೆಗೆ ಅನುಮತಿ ನೀಡುವ ವೇಳೆಗೆ ಆಗಾಗ್ಗೆ ಹಾಗೂ ಕ್ರಮಬದ್ಧವಾಗಿ ತಪಾಸಣೆ ನಡೆಸಬೇಕು ಹಾಗೂ ಕಾರ್ಮಿಕ ಇಲಾಖೆಯು ತನ್ನ ಜವಾಬ್ದಾರಿ ಹಾಗೂ ಕರ್ತವ್ಯವನ್ನು ಪೂರೈಸಲು ಸಾಕಷ್ಟು ಸಿಬ್ಬಂದಿ ವರ್ಗವನ್ನು ಹೊಂದಿರಬೇಕು. ಇಂತಹ ನಿಬಂಧನೆಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

- ಕಂದಾಯ ಹಾಗೂ ಖನಿಜದ ನಿರ್ದಿಷ್ಟ ಗುಣಮಟ್ಟವನ್ನು ನಿಗದಿಪಡಿಸಲು ಗುತ್ತಿಗೆ ಪ್ರದೇಶ, ಖನಿಜದ ಬಗೆ, ಗುತ್ತಿಗೆ ಅವಧಿ, ಖನಿಜ ಹೊರತೆಗೆಯುವ ಚಟುವಟಿಕೆಗಳ ಲಕ್ಷಣಗಳು ಹಾಗೂ ಕಾರ್ಮಿಕರು ಸ್ಥಳೀಯರಿರಲಿ ಅಥವಾ ವಲಸೆಯವರಿರಲಿ, ಒಂದು ನಿರ್ದಿಷ್ಟ ಕಾರ್ಯ ಯೋಜನೆಗೆ ಬೇಕಾದ ಉದ್ಯೋಗಿಗಳ ಸರಿಯಾದ ಮಾಹಿತಿಗೆ ಬೇಕಾದ ಲಿಂಗ ಅನುಪಾತ ಗಣಿಕಾರ್ಮಿಕರು ಅರ್ಥಾತ್ ಮಹಿಳೆಯರು ಎಷ್ಟು ಪುರುಷರು ಎಷ್ಟು ಸಂಖ್ಯೆಯಲ್ಲಿ ಆ ಕಾರ್ಯಯೋಜನೆಗೆ ಬೇಕಾಗಬಹುದೆನ್ನುವ ಮಾಹಿತಿ ಹಾಗೂ ಔಪಚಾರಿಕವಾಗಿ ನೇಮಕವಾದವರೋ ಅಥವಾ ಗುತ್ತಿಗೆ ಕಾರ್ಮಿಕರೋ ಇವುಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.
- ಗುತ್ತಿಗೆಗೆ ಅನುಮತಿ ನೀಡುವಾಗ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಶಿಕ್ಷಣ ಹಾಗೂ ವೈದ್ಯಕೀಯ ಸೌಕರ್ಯಗಳು ಇವೆಯೋ ಇಲ್ಲವೋ ಎಂದು ತಪಾಸಣೆ ನಡೆಸಬೇಕು. ಇಂತಹ ತಪಾಸಣೆಯೂ ಸ್ಥಳೀಯ ಅಂಗಸಂಸ್ಥೆಗಳ ಮೂಲಕ, ಗಣಿ ಮಾಲೀಕರೇ ಸ್ವತಃ ಅಥವಾ ರಾಜ್ಯಮಟ್ಟದ ಆಡಳಿತ ಅಂಗಗಳು ತಪಾಸಣೆ ನಡೆಸಿ ಕಾರ್ಮಿಕರ ಕುಟುಂಬಗಳು ಉತ್ತಮ ಗುಣಮಟ್ಟದ ಜೀವನ ನಡೆಸಬಹುದು ಎಂದು ಭರವಸೆ ನೀಡಬೇಕು.
- ಗಣಿ ಕಾರ್ಯಾಚರಣೆಯ ಗುಣಮಟ್ಟವನ್ನು ನಿರ್ಧರಿಸುವಾಗ ಕಾರ್ಯಾಚರಣೆಗೆ ಬಳಸುವ ಉಪಕರಣಗಳ ಗುಣಲಕ್ಷಣಗಳು, ಸುರಕ್ಷತಾ ಸಾಧನ, ಕೆಲಸದ ಗಂಟೆಯ ಅವಧಿ, ರವಾನೆ ಮಾಡುವ ಸಂಚಾರಿ ಸಾಧನ ಸೌಕರ್ಯಗಳು, ಮಹಿಳಾ ಕಾರ್ಮಿಕರ ಬದುಕನ್ನು ಸುಭದ್ರಗೊಳಿಸುವ ಕನಿಷ್ಠ ಸಂಬಳ, ವಿಮೆ, ವೈದ್ಯಕೀಯ ಹಾಗೂ ಆರೋಗ್ಯ ಸವಲತ್ತುಗಳು ಹಾಗೂ ಮಹಿಳಾ ಕಾರ್ಮಿಕರಿಗಾಗಿ ಬೇಕಾದ ತಂತ್ರಜ್ಞಾನದ ಸೌಕರ್ಯಗಳು ಇವೆಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಗಣಿ ಮಾಲೀಕನು ಇದನ್ನೆಲ್ಲ ಒದಗಿಸುವ ಸಾಮರ್ಥ್ಯವನ್ನು ಅಳೆದುಕೊಂಡೇ ಗಣಿ ಗುತ್ತಿಗೆಗೆ ಅನುಮತಿಯನ್ನು ನೀಡಬೇಕು.
- ಗಣಿ ಗುತ್ತಿಗೆಗೆ ಅರ್ಜಿ ಹಾಕಿಕೊಳ್ಳುವವನನ್ನು ಕೇವಲ ಬಂಡವಾಳದ ಆಧಾರದ ಮೇಲೆ ಮಾತ್ರ ಅಳೆಯದೆ, ಆತ ಸರಿಯಾದ ಕೆಲಸದ ಸ್ಥಿತಿಯನ್ನು ಒದಗಿಸಬಲ್ಲನೇ ಎಂದು ಕೂಡ ನೋಡಬೇಕು. ಗಣಿ ಕೆಲಸಕ್ಕೆ ವಲಸೆ ಕಾರ್ಮಿಕರನ್ನು ನಿಯಮಿಸಿಕೊಳ್ಳುವಾಗ ಇವು ತೀರಾ ಅಗತ್ಯವಾಗಿರುತ್ತದೆ.
- ಮಹಿಳಾ ಗಣೀ ಕಾರ್ಮಿಕರ ಮಕ್ಕಳಿಗೆ ಧೂಳು ಹಾಗೂ

ಸದ್ದಿನಿಂದ ರಕ್ಷಣೆ ಒದಗಿಸಲು ಶಿಶುವಿಹಾರದ ಅವಶ್ಯಕತೆಯನ್ನು ಪೂರೈಸಬೇಕು. ಇಂತಹ ಕಡೆ ಪೂರ್ಣಾವಧಿ ಕೆಲಸ ಮಾಡುವ ಶಿಶುಪಾಲಕರು, ಪೌಷ್ಠಿಕ ಆಹಾರ ಪೂರೈಕೆ ಮಾಡಬೇಕು. ಮಹಿಳೆಯರಿಗೆ ಅವರ ಕೆಲಸದ ನಡುವೆ ಮಕ್ಕಳನ್ನು ಕೆಲಕಾಲ ನೋಡಿಕೊಳ್ಳುವ ಹಾಗೆ ವಿಶ್ರಾಂತಿ ನೀಡಬೇಕು. ಶಿಶುವಿಹಾರದ ಮಕ್ಕಳು ಹಾಗೂ ಕಾರ್ಮಿಕರಿಗೆ ಸುರಕ್ಷಿತವಾದ ಕುಡಿಯುವ ನೀರನ್ನು ಒದಗಿಸಬೇಕು.

೬. ಕಾನೂನಿನ ಭದ್ರತೆಯ ದೃಷ್ಟಿಯಿಂದ ಗಣಿಕಾಯಿದೆ ೧೯೫೨ ಹಾಗೂ ಗಣಿ ಹಾಗೂ ಖನಿಜ (ಅಭಿವೃದ್ಧಿ ಹಾಗೂ ನಿಯಂತ್ರಣ) ಕಾಯಿದೆ ೧೯೫೭ ಇವೆರಡೂ ಕಾಯಿದೆಗಳನ್ನೂ ತಿದ್ದುಪಡಿ ಮಾಡುವ ಅಗತ್ಯವಿದೆ. ಅನೌಪಚಾರಿಕ ಕಾರ್ಮಿಕರು ಎಲ್ಲಿ ಹೆಚ್ಚಾಗಿ ಕೆಲಸ ಮಾಡುವರೋ ಅವರನ್ನು ಸಂಬಂಧಿಸಿ ಮೇಲಿನ ನೀತಿಗೆ ಇನ್ನಷ್ಟು ಸವಲತ್ತುಗಳನ್ನು ಸೇರಿಸಬೇಕು. ಈ ಕಾನೂನಿನ ಒಳಗಡೆ, ಕಾರ್ಮಿಕ ಹಕ್ಕನ್ನು ಭದ್ರಪಡಿಸುವುದಕ್ಕಾಗಿ, ಗಣಿ ಗುತ್ತಿಗೆಗೆ ಅನುಮತಿ ನೀಡುವ ಮೊದಲೇ ಪೂರ್ವ ನಿಬಂಧನೆಗಳು ಹಾಗೂ ಮುನ್ನೆಚ್ಚರಿಕೆ ನಿಯಮಗಳನ್ನು ಸೇರಿಸಬೇಕು. ಈ ಪೂರ್ವ ನಿಬಂಧನೆಯು ಗಣಿ ಯೋಜನೆಯ ಪ್ರದೇಶದ ಚಟುವಟಿಕೆಗಳ ಆರಂಭಕ್ಕೆ ಮುನ್ನವೇ ಹಾಕಲ್ಪಡಬೇಕು. ಕಾರ್ಯಗತಗೊಳ್ಳಬೇಕು. ಕಾರ್ಯಗತಗೊಂಡಿದೆಯೋ ಇಲ್ಲವೇ ಎನ್ನುವುದು ನಾಗರಿಕ ಸಮಾಜದ ಗುಂಪುಗಳು ಹಾಗೂ ಕಾರ್ಯಕರ್ತರು ಇದರ ತಪಾಸಣೆ ನಡೆಸಬೇಕು ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳೇ ಗಣಿ ನಡೆಯುವ ಪ್ರದೇಶದ ನಿಗ್ರಹಕ್ಕೆ ಪ್ರಯತ್ನಿಸಬೇಕು.

೭. ಅನೌಪಚಾರಿಕ, ಗುತ್ತಿಗೆ, ಹಂಗಾಮಿ ಹಾಗೂ ವಲಸೆ ಗಣಿ ಕಾರ್ಮಿಕರ ಬಗ್ಗೆ ಹಾಗೂ ಈ ವಿಭಾಗದಲ್ಲಿ ಬರುವ ಕಾರ್ಮಿಕರ ಹಕ್ಕುಗಳೇನು ಎನ್ನುವ ಬಗ್ಗೆ ವಿವರಣೆಯಲ್ಲಿ ಯಾವುದೇ ಸ್ಪಷ್ಟತೆಯೂ ನಮಗೆ ದೊರಕುವುದಿಲ್ಲ. ಕಾನೂನಿನಲ್ಲಿ ಇವೆಲ್ಲದರ ಬಗ್ಗೆ ಸ್ಪಷ್ಟವಾಗಿ ವಿವರಿಸದ ಹೊರತು ಮಹಿಳಾ ಗಣಿ ಕಾರ್ಮಿಕರಿಗೆ ಯಾವುದೇ ರಕ್ಷಣೆಯೂ ಸಿಗುವುದಿಲ್ಲ. ವಿಶೇಷವಾಗಿ ಭಾರತದಲ್ಲಿ ಗಣಿ ಚಟುವಟಿಕೆಗಳ ಕಾರ್ಮಿಕರ ವಿಭಾಗದಲ್ಲಿ ವಲಸೆ ಮಹಿಳಾ ಗಣಿ ಕಾರ್ಮಿಕರದ್ದೇ ಒಂದು ದೊಡ್ಡ ವಿಭಾಗವಿದೆ. ಇವರೇ ದೇಶದಲ್ಲಿನ ಗಣಿ ಸಂಬಂಧಿತ ಚಟುವಟಿಕೆಗಳನ್ನು ವಿಸ್ತರಿಸುವ ಯೋಜನೆಗೆ ಹೆಚ್ಚು ನೀರನ್ನು ಎರೆಯುವವರಾಗಿದ್ದಾರೆ. ವಲಸೆ ಕಾರ್ಮಿಕರಿಗಾಗಿ ಇರುವ ಕಾರ್ಮಿಕ ಕಾಯಿದೆಯಾದ ಅಂತರ್-ರಾಜ್ಯ ವಲಸೆ ಕಾರ್ಮಿಕರ (ಸೇವೆಯ ನಿಯಮ ಉದ್ಯೋಗ ಹಾಗೂ ಸ್ಥಿತಿಗತಿ) ಕಾಯಿದೆ ೧೯೭೯ ಇದು ಕಾರ್ಮಿಕರ ಬಗ್ಗೆ ವಿಶಾಲ ಭಾವನೆ ಹೊಂದಿರುವುದಾಗಿದ್ದರೂ ಮಹಿಳಾ ಗಣಿ ಕಾರ್ಮಿಕರ ಸಮಸ್ಯೆಯ ಮೇಲೆ ಬೆಳಕು ಚೆಲ್ಲಲು ವಿಫಲವಾಗಿದೆ. ಹಾಗಾಗಿ ಈ ಕಾಯಿದೆಯು 'ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ ೨೦೦೮' ಹಾಗೂ 'ಗಣಿ ಕಾಯಿದೆ ೧೯೫೨' ಇವುಗಳಲ್ಲಿ ಮಹಿಳಾ ಕಾರ್ಮಿಕರ ಕಾನೂನಿನ ಹಕ್ಕನ್ನು ಸ್ಪಷ್ಟಪಡಿಸಬೇಕು. ಅದರಲ್ಲೂ ಮಹಿಳಾ ಕಾರ್ಮಿಕರ ಪ್ರಗತಿಗಾಗಿ ಉತ್ತೇಜನ ನೀಡುವ ಮಾರ್ಗವನ್ನು ತಿಳಿಸಬೇಕು. ಯಾಕೆಂದರೆ ಇದೊಂದೇ ಹೆಚ್ಚುವರಿ ಸವಲತ್ತನ್ನು ನಾವು ಅವರಿಗೆ ನೀಡಬಹುದಾಗಿದೆ.

೮. ಗಣಿಗಳು ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಕಾನೂನು ಎಷ್ಟರಮಟ್ಟಿಗೆ ಜಾರಿಗೊಳಿಸಲ್ಪಟ್ಟಿದೆ ಎನ್ನುವುದನ್ನು ಪುನಃ ಪರಿಶೀಲಿಸುವ ಕಾರ್ಯ ಆಗಬೇಕಾಗಿದೆ. ಕಬ್ಬಿಣದ ಅದಿರು ಗಣಿ, ಮ್ಯಾಂಗನೀಸ್ ಅದಿರು ಗಣಿ ಹಾಗೂ ಕ್ರೋಮ್ ಅದಿರು ಗಣಿ ಕಾರ್ಮಿಕ ಯೋಗಕ್ಷೇಮ ನಿಧಿ ಕಾಯಿದೆ ೧೯೭೬, ಸುಣ್ಣದ ಕಲ್ಲು ಹಾಗೂ ಡೊಲೊಮೈಟ್ ಗಣಿ ಕಾರ್ಮಿಕ ಯೋಗಕ್ಷೇಮ ನಿಧಿ ಕಾಯಿದೆ ೧೯೪೬ ಇವುಗಳಲ್ಲಿ ಕೇಂದ್ರ ಸಲಹಾ ಸಮಿತಿ ಹಾಗೂ ಸಲಹಾ ಸಮಿತಿಯಲ್ಲಿ ಮಹಿಳಾ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಹೇಳಲ್ಪಟ್ಟಿರುತ್ತದೆ. ಅದು ಎಷ್ಟರಮಟ್ಟಿಗೆ ಜಾರಿಗೊಳ್ಳಲ್ಪಟ್ಟಿದೆ ಎಂದು ಪರಿಶೀಲಿಸಬೇಕಾಗಿದೆ.

೯. ಗಣಿ ಮಾಲೀಕತ್ವದಲ್ಲಿ ಬೇರೆ ಬೇರೆ ಹಂತಗಳಿದ್ದು ದೊಡ್ಡ ಕಂಪನಿಗಳು ನೇರವಾಗಿ ಗಣಿಯಿಂದ ಅದಿರನ್ನು ಹೊರತೆಗೆಯುತ್ತವೆ ಇಲ್ಲವೇ ಅದಿರನ್ನು ಸ್ಥಳೀಯ ಗುತ್ತಿಗೆದಾರರಿಂದ ಖರೀದಿಸುತ್ತಾರೆ. ವ್ಯಾಪಾರಿಗಳು ಸಂಸ್ಕರಣಗೊಂಡ ಅದಿರು / ಖನಿಜಗಳನ್ನು ಖರೀದಿಸುತ್ತಾರೆ. ಅದು ಮಾರುಕಟ್ಟೆಗೆ ಹೋಗುತ್ತವೆ. ಇವು ಮಾರುಕಟ್ಟೆ ಹಾಗೂ ಗಣಿಯಿಂದ ಅದಿರಿನ ಸರಪಳಿಯಾಗಿದೆ. ಈ ಎಲ್ಲ ಹಂತಗಳಲ್ಲೂ, '೧೯೫೨ರ ಗಣಿ ಕಾಯಿದೆ' ಯ ಪ್ರಕಾರ ಕಾರ್ಮಿಕರ ಭದ್ರತೆಗೆ

ಕಾನೂನಿನ ಜವಾಬ್ದಾರಿ ಇರಬೇಕು. ಇದು ತುಂಬಾ ಅಗತ್ಯದ ಸಂಗತಿಯಾಗಿದ್ದು, ಬಹುತೇಕ ಮಹಿಳಾ ಕಾರ್ಮಿಕರು ಗುತ್ತಿಗೆದಾರರ ಮೂಲಕ ದಿನಗೂಲಿಗೆ ನೇಮಕ ಮಾಡಿಕೊಳ್ಳಲ್ಪಡುತ್ತಾರೆ. ಈ ಅನೌಪಚಾರಿಕ ಕಾರ್ಮಿಕರ ಬಗ್ಗೆ ದೊಡ್ಡ ಕಂಪನಿಗಳು ಕೂಡ ಯಾವ ಜವಾಬ್ದಾರಿ ತೆಗೆದುಕೊಳ್ಳದಿರುವುದು ವಾಸ್ತವ ಸತ್ಯವಾಗಿದೆ. ಹಾಗಾಗಿ ಈ ಗಣಿಯ ಸಂಪೂರ್ಣ ಕಾರ್ಯಾಚರಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಕಾರ್ಮಿಕರನ್ನು ಮಾಲೀಕರು ನೇರವಾಗಿ ನೇಮಕ ಮಾಡಿಕೊಳ್ಳಲಿ ಅಥವಾ ಮಾಡಿಕೊಳ್ಳದೇ ಇರಲಿ, ಅದು ನಗಣ್ಯ. ಏನೇ ಆದರೂ ಗಣಿಯ ಮುಖ್ಯ ಮಾಲೀಕರು ಈ ಕಾರ್ಮಿಕರ ಎಲ್ಲ ಸಂಗತಿಗೆ ಜವಾಬ್ದಾರರಾಗಿರಬೇಕು. ಸದ್ಯ ಈಗ ಇರುವ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಹಾಗೂ ನಿರ್ಮೂಲನ) ಕಾಯಿದೆ ೧೯೭೦. ಇದರಲ್ಲಿ ಮಾಲೀಕರು ಜವಾಬ್ದಾರರಾಗುತ್ತಾರೆ ಎಂದೇ ಬಿಂಬಿಸಲಾಗಿದ್ದರೂ ಕೂಡ ಆ ಕಾನೂನಿನಲ್ಲಿ ಇರುವ ತೂತುಗಳನ್ನೇ ದೊಡ್ಡದು ಮಾಡಿಕೊಂಡು ಮಾಲೀಕರು ತಪ್ಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಸರಿಯಾದ ಒಪ್ಪಂದಗಳ ಮೂಲಕ ಈ ದೋಷವನ್ನು ಸರಿಪಡಿಸಿಕೊಂಡು ಬಲಗೊಳಿಸಬೇಕು. ಮುಖ್ಯ ಗಣಿ ಮಾಲೀಕರು / ಗಣಿ ಕಂಪನಿ ಹಾಗೂ ಸ್ಥಳೀಯ ಗುತ್ತಿಗೆದಾರರು, ಇವರ ನಡುವೆ ಏನು ಒಪ್ಪಂದವಾಗಿರುತ್ತದೆಯೋ ಅದು ಬಹಿರಂಗಗೊಳ್ಳಬೇಕು ಹಾಗೂ ಕಾರ್ಮಿಕರನ್ನು ಕೂಲಿಗೆ ತೆಗೆದುಕೊಳ್ಳುವ ವಿಚಾರದಲ್ಲಿ ಪಾರದರ್ಶಕತೆ ಇರಬೇಕು. ತನ್ಮೂಲಕ 'ಗಣಿಕಾಯಿದೆ ೧೯೫೨' ಗೌರವಿಸಲ್ಪಡಬೇಕು. ಇಷ್ಟೇ ಅಲ್ಲದೆ, ಕಾರ್ಮಿಕ ಕಛೇರಿ ಸಿಬ್ಬಂದಿಗಳ ಮೂಲಕ ಗಣಿ ಪ್ರದೇಶದ ತಪಾಸಣೆಗಾಗಿ ಇರುವ ಸಾಧನವನ್ನು ಬಲಪಡಿಸಲು ಇವು ನೆರವಾಗುತ್ತವೆ.

೧೦. ಗಣಿಯನ್ನು ಗುತ್ತಿಗೆಗೆ ನೀಡುವಾಗ ಮಂಜೂರು ಮಾಡುವ ವೇಳೆಯಲ್ಲೇ ಗಣಿ ಮಾಲೀಕರು ಕಾರ್ಮಿಕರ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿ '೧೯೫೨ ಗಣಿ ಕಾಯಿದೆ' ಯನ್ನು ಅನುಸರಿಸದಿದ್ದರೆ ಎಂತಹ ಶಿಕ್ಷೆಗೆ ಒಳಗಾಗಬಹುದು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಹಾಗೂ ಇದನ್ನು ಕಾನೂನಿನ ಚೌಕಟ್ಟಿನೊಳಗೆ ಸೇರಿಸಬೇಕು. ಗಣಿ ಮಾಲೀಕರು ನಡೆಸುವ ವಿಭಿನ್ನ ಅಪರಾಧಗಳಿಗೆ ಪರವಾನಗಿಯನ್ನು ರದ್ದುಪಡಿಸುವಂತಹ ಕ್ರಮಗಳೊಡಗೂಡಿ ಬೇರೆ ಬೇರೆ ಶಿಕ್ಷೆಯ ಕ್ರಮವನ್ನು ಕೂಡ ಸ್ಪಷ್ಟಪಡಿಸಬೇಕು. ಈ ಅಪರಾಧಗಳಲ್ಲಿ ಬಾಲಕಾರ್ಮಿಕರ ನೇಮಕ, ಮಹಿಳಾ ಕಾರ್ಮಿಕರಿಗೆ ಸೌಲಭ್ಯ ಒದಗಿಸದಿರುವುದು, ಇವುಗಳಿಗೆ ಹೆಚ್ಚು ಒತ್ತು ನೀಡಬೇಕು. ಮಾಹಿತಿ ಹಾಗೂ ಕಾರ್ಮಿಕರಿಗೆ ಸಂಬಂಧಿತ ವಿವರಗಳಾದ ಅಪಘಾತ, ಅಪಘಾತದ ಸವಲತ್ತುಗಳ ಮೇಲಿನ ವೆಚ್ಚ, ಹಿರಿಗೆ ಸವಲತ್ತು, ವಿಮೆ ಹಾಗೂ ಇನ್ನುಳಿದ ವಿವರಗಳನ್ನು ಕಡ್ಡಾಯವಾಗಿ ಗಣಿ ಕಂಪನಿಯ ಕಛೇರಿಗಳಲ್ಲಿ ಹಾಗೂ ಸಂಬಂಧಪಟ್ಟ ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ತೆರೆದಿಟ್ಟಿರಬೇಕು.

೧೧. ದೂರು ಹಾಗೂ ಪರಿಹಾರ ಕ್ರಮಗಳು, ಮಹಿಳಾ ಕಾರ್ಮಿಕರು ದೂರು ನೀಡಲಿಕ್ಕೆ ಹಾಗೂ ಪರಿಶೋಧನೆ, ಮೌಲ್ಯಮಾಪನ ಹಾಗೂ ದೂರಿಗೆ ಪರಿಹಾರ ನೀಡುವಲ್ಲಿ ಭಾಗವಹಿಸುವದಕ್ಕೆ ಅವರನ್ನು ಸಮರ್ಥಗೊಳಿಸುವಷ್ಟು ಬಲವನ್ನು ಒದಗಿಸಬೇಕು. ಇವುಗಳು ಮಹಿಳಾ ಕಾರ್ಮಿಕರು ತಮ್ಮ ಉದ್ಯೋಗದ ವಿವರಗಳನ್ನು ಸೂಚಿಸುವಂತಹ ಗುರುತಿನ ಚೀಟಿಯನ್ನು ಹೊಂದುವ ಮಹಿಳಾ ಕಾರ್ಮಿಕರ ಹಕ್ಕು ಹಾಗೂ ಒಟ್ಟಾಗಿ ಸಂಬಳ ಹಾಗೂ ಸವಲತ್ತುಗಳಿಗೆ ಬೇಡಿಕೆ ಇಡುವಂತಹ ಹಾಗೂ ಒಕ್ಕೂಟ ರಚನೆಯ ಹಕ್ಕನ್ನು ಇದರೊಳಗೆ ಸೇರಿಸಬೇಕು. ವಿಶೇಷವಾಗಿ ಇದು ಲೈಂಗಿಕ ಕಿರುಕುಳದ ವಿರುದ್ಧ ದೂರನ್ನು ನೀಡುವುದು, ಮಹಿಳಾ ಗಣಿ ಕಾರ್ಮಿಕರ ಹಿಂಸೆ ಹಾಗೂ ಶೋಷಣೆ ಇವುಗಳಿಗಾಗಿ ದೂರು ನೀಡುವುದನ್ನೂ ದೂರು ಹಾಗೂ ಪರಿಹಾರಕ್ರಮದಲ್ಲಿ ಸೇರಿಸಬೇಕು. ಹಾಗೂ ಹದಿಹರೆಯದ ಹುಡುಗಿಯರ ನಿರ್ವಹಣಾ ವಿಭಾಗವಿರಬೇಕು. ಇದರಿಂದ ಗಣಿಯಲ್ಲಿ ಕೆಲಸ ಮಾಡುವ ಹದಿಹರೆಯದ ಹೆಣ್ಣು ಮಕ್ಕಳಿಗೆ ರಕ್ಷಣೆ ದೊರೆಯುತ್ತದೆ. ಹೀಗೆ ಬರುವ ದೂರುಗಳನ್ನು ಸ್ಥಳೀಯ ಕಾರ್ಮಿಕ ಇಲಾಖೆ ಕಛೇರಿಗಳಿಗೆ ಸಾರ್ವಜನಿಕ ತಪಾಸಣೆಗಾಗಿ ಕಳುಹಿಸಲ್ಪಡುವ ವ್ಯವಸ್ಥೆಯಾಗಬೇಕು.

೧೨. ಕಾರ್ಮಿಕ ಇಲಾಖೆಯು ನಡೆಸುವ ಕ್ರಮಬದ್ಧ ಗಣಿಪ್ರದೇಶದ ತಪಾಸಣೆಯ ಸಾಮರ್ಥ್ಯವು ಪ್ರಶ್ನಾರ್ಹವಾಗಿದ್ದು ಈಗ ಸದ್ಯದ ಸ್ಥಿತಿ ಅವಲೋಕಿಸಿದರೆ ಅವು ಗಣಿ ಪ್ರದೇಶದ ಕಾರ್ಯಾಚರಣೆಯ ನಾಲ್ಕನೇ ಒಂದು ಭಾಗವನ್ನಾದರೂ ತಲುಪುವುದೋ ಇಲ್ಲವೋ ಎನ್ನುವುದೇ ಪ್ರಶ್ನೆ. ಇದು ಕಾನೂನು ಬಾಹಿರ ಗಣಿ ಚಟುವಟಿಕೆಯ ಬಗ್ಗೆಯೂ

ಪ್ರಶ್ನೆ ಮೂಡಿಸುತ್ತದೆ. ಏಕೆಂದರೆ, ಇಂದು ಶೇ. ೪೦ಕ್ಕಿಂತ ಹೆಚ್ಚು ಗಣಿ ಪ್ರದೇಶಗಳು ಕಾನೂನು ಬಾಹಿರವಾಗಿ ಚಟುವಟಿಕೆಯನ್ನು ನಡೆಸುತ್ತವೆ. ಗಣಿ ಸಚಿವಾಲಯ ಹಾಗೂ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ ಇವೆರಡೂ ಒಟ್ಟಾಗಿ ಕಲೆತು ಸಂಪನ್ಮೂಲ ಹಂಚುವಿಕೆ, ಅಧಿಕಾರಿ ಸಿಬ್ಬಂದಿ ನಿರ್ವಹಣೆ ಮೊದಲಾದ ವಿಚಾರದಲ್ಲಿ ಮಧ್ಯೆ ಪ್ರವೇಶಿಸಲು ಒಂದು ಯೋಜನೆಯನ್ನು ರೂಪಿಸಿ ಈ ಗಂಭೀರ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕು.

೧೩. ಸಣ್ಣ ಪ್ರಮಾಣದ ಗಣಿಗಾರಿಕೆ ಹಾಗೂ ಸಣ್ಣ ಗಣಿಗಳು ರಾಜ್ಯ ಸರ್ಕಾರದ ಪರಿಧಿಯೊಳಗೆ ಬರುವುದರಿಂದ ಮಹಿಳಾ ಕಾರ್ಮಿಕರ ಹಾಗೂ ವಲಸೆ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವಂತಹ ಕಾಯಿದೆಗಳನ್ನು ರಾಜ್ಯ ಸರ್ಕಾರವು ರೂಪಿಸಬೇಕು. ಇವುಗಳ ವಿವರಗಳು ಎಲ್ಲ ಮಟ್ಟದಲ್ಲಿ ದೊರೆಯಬೇಕು ಹಾಗೂ ಸಂಬಂಧಪಟ್ಟ ಎಲ್ಲ ಇಲಾಖೆಗಳಿಗೆ, ಹೊಸ ಗಣಿ ಪ್ರದೇಶದಲ್ಲಿ ಕಾರ್ಮಿಕರಿಗೋಸ್ಕರ ಸೇವೆ, ಸಂಪನ್ಮೂಲ ಹಾಗೂ ನಿಧಿ ಒದಗಿಸಲು ಮತ್ತು ಮಹಿಳಾ ಕಾರ್ಮಿಕರ ಹಕ್ಕುಗಳಾದ ವಸತಿ, ನೀರು, ಶೌಚಾಲಯ ಮೊದಲಾದವುಗಳಿಗೆ ಒಪ್ಪಿಗೆ ಪಡೆಯಲು ಕಳುಹಿಸಬೇಕು.

೧೪. ಗಣಿಗಳಲ್ಲಿ ಕನಿಷ್ಠ ಸಂಬಳವು ಪರಿಶೀಲನೆಗೆ ಒಳಪಡುವ ಅಗತ್ಯವಿದೆ. ಏಕೆಂದರೆ ಬಹುತೇಕ ಮಹಿಳಾ ಕಾರ್ಮಿಕರು ಕುಟುಂಬದಲ್ಲಿನ ಆರೋಗ್ಯ ಸಮಸ್ಯೆಗಳು, ಸಾವು, ಗಣಿ ಕಾರ್ಮಿಕರ ಕುಟುಂಬದ ಸಾಲದ ಹೊರೆ ಇವುಗಳಿಂದಾಗಿ ಬಲವಂತವಾಗಿ ಕೆಲಸಕ್ಕೆ ಇಳಿಯುತ್ತಿದ್ದಾರೆ. ಗಣಿ ಕಾರ್ಮಿಕರ ಹಾಗೂ ಅವರ ಕುಟುಂಬದ ಆರ್ಥಿಕ ಸ್ಥಿತಿಗತಿಯ ಸರಿಯಾದ ಪರಿಶೀಲನೆಯ ತುರ್ತು ಅಗತ್ಯ ಎದುರಾಗಿದೆ. ಇದರಿಂದ ಮಹಿಳಾ ಕಾರ್ಮಿಕರು ತಮ್ಮ ಕೆಲಸಕ್ಕೆ ತಕ್ಕ ಸಂಬಳವನ್ನು ಪಡೆಯುದಿರುವ ಸಮಸ್ಯೆಯನ್ನು ಎದುರಿಸುತ್ತಿದ್ದು ಅವರ ಸಂಬಳದ ಸರಿಯಾದ ಲೆಕ್ಕ ದೊರಕುತ್ತದೆ.

೧೫. ಗಣಿ ಗುತ್ತಿಗೆಯ ಲಕ್ಷಣವನ್ನು ಅವಲಂಬಿಸಿ ಸಂಬಂಧಪಟ್ಟ ಗ್ರಾಮಸಭೆ, ಪಂಚಾಯತ್, ಜಿಲ್ಲಾ ಪರಿಷತ್‌ಗಳ "ಎಲ್ಲವೂ ಸರಿಯಾಗಿದೆ" ಎನ್ನುವ ಪ್ರಮಾಣಪತ್ರವನ್ನು ಪಡೆಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರು ಭಾಗವಹಿಸಿ ಎಲ್ಲವನ್ನೂ ಪರಿಶೀಲಿಸಿ ಪ್ರಮಾಣಪತ್ರವನ್ನು ನೀಡುವುದನ್ನೂ ಇದರಲ್ಲಿ ಸೇರಿಸಬೇಕು. ಗುತ್ತಿಗೆ ಪ್ರದೇಶಕ್ಕೆ, ಸ್ಥಳೀಯವಾಗಿ ಹಾಗೂ ಹೊರಗಿನಿಂದ ನೇಮಿಸಿಕೊಂಡ ಕೂಲಿಗಳ ಸಂಖ್ಯೆ, ವಲಸೆ ಕಾರ್ಮಿಕರು ಹಾಗೂ ಅವರು ಎಷ್ಟು ದಿನಗಳ ಅವಧಿಯವರೆಗೆ ಕೆಲಸ ಮಾಡುವರೋ ಅದರ ವಿವರ, ಕಾರ್ಮಿಕರ ವಸತಿಗೆ ನೀರಿನ ಹಾಗೂ ಉಳಿದ ಸಂಪನ್ಮೂಲದ ವಿವರ ಇವುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಪ್ರಮಾಣಪತ್ರ ನೀಡುವ ವೇಳೆಗೆ ಕಮ್ಯುನಿಟಿಯ ಮಹಿಳೆಯರಿಗೆ ನೀಡಬೇಕು.

೧೬. ಕಾರ್ಮಿಕರಿಗೆ ಹಾಗೂ ಸಮುದಾಯದಲ್ಲಿ ಇರುವವರಿಗೆ ನೀರು ಅತ್ಯಂತ ಅಗತ್ಯದ ವಸ್ತುವಾಗಿದ್ದು ವಿಶೇಷವಾಗಿ ಮಹಿಳೆಯರೇ ನೀರನ್ನು ಸಂಗ್ರಹಿಸುವ ಹೊಣೆ ಹೊತ್ತಿರುತ್ತಾರೆ. ಗಣಿ ಗುತ್ತಿಗೆಯನ್ನು ಮಂಜೂರು ಮಾಡುವಾಗ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಹಾಗೂ ಕಾರ್ಮಿಕರ ಬಳಕೆಗೆ ನೀರನ್ನು ಗಣಿ ಪ್ರದೇಶದಲ್ಲಿ ಹಾಗೂ ಅವರ ವಸತಿ ಪ್ರದೇಶದಲ್ಲಿ ಒದಗಿಸುವ ಬಗ್ಗೆ ಪೂರ್ವ ನಿಬಂಧನೆ ಹಾಕಬೇಕು. ಕಲುಷಿತ ನೀರನ್ನು ಹೊಂದಿದ ಅಥವಾ ನೀರಿನ ಕೊರತೆಯಂತಹ ನೀರಿನ ಸಮಸ್ಯೆಯನ್ನು ಎದುರಿಸುವ ಪ್ರದೇಶವನ್ನು "ಹೋಗಲಾರದ ಪ್ರದೇಶ" ಎಂದು ಗುರುತಿಸಿ ಇನ್ನು ಮುಂದೆ ಅಲ್ಲಿ ಗಣಿಗಾರಿಕೆ ವಿಸ್ತರಿಸುವುದನ್ನು ನಿಷೇಧಿಸಬೇಕು.

೧೭. ಗಣಿ ಮಾಲಿಕರು, ನಿಯಮಿತವಾಗಿ ನೀರಿನ ಸಂಗ್ರಹ ಸ್ಥಳಗಳನ್ನು, ಗಣಿ ಪರದೇಶದ ಸುತ್ತಮುತ್ತಲಿನ ಪ್ರದೇಶವನ್ನು, ಕಾರ್ಮಿಕರ ವಸತಿಗೃಹ ಹಾಗೂ ಸಮುದಾಯ ಪ್ರದೇಶವನ್ನು ಸ್ವಚ್ಛಗೊಳಿಸುವ ಜವಾಬ್ದಾರಿ ಹೊರಬೇಕಾಗುತ್ತದೆ. ಇದನ್ನು ಗಣಿ ಗುತ್ತಿಗೆ ಮಂಜೂರು ಮಾಡುವ ವೇಳೆಗೆ ತಿಳಿಸಬೇಕಾಗುತ್ತದೆ. ಇದಕ್ಕಾಗಿ ತಗಲುವ ವೆಚ್ಚವನ್ನು ಯೋಜನೆಯ ವೆಚ್ಚದಲ್ಲೇ ಸೇರಿಸಬೇಕೇ ವಿನಃ ಕಾರ್ಮಿಕರ ಸಂಬಳದಿಂದ ಪಡೆಯಕೂಡದು.

೧೮. ಗಣಿಗಳಲ್ಲಿ ಮಹಿಳೆಯರು ಕೆಲವು ಅಪಾಯಕರ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇಂತಹ ಕೆಲಸಗಳನ್ನು ಗುರುತಿಸಿ ಗಣಿ ಸಚಿವಾಲಯವು ಇದರ ಬಗ್ಗೆ ವಿವರವಾದ ವರದಿಯನ್ನು ಹಾಗೂ ಅದಕ್ಕೆ ಕೈಗೊಳ್ಳಬೇಕಾದ ಕ್ರಮಗಳ ವಿವರಗಳಿಂದ ಕೂಡಿದ ವರದಿಯನ್ನು ಪಡೆಯತಕ್ಕದ್ದು.

೧೯. ವೃತ್ತಿಗೆ ಸಂಬಂಧಪಟ್ಟ ರೋಗಗಳು ಹಾಗೂ ಗಣಿ ಚಟುವಟಿಕೆಗೆ ಸಂಬಂಧಪಟ್ಟ ಸಾಮಾಜಿಕ, ದೈಹಿಕ

ಕಾಯಿಲೆಗಳ ಹಾಗೂ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಮಾಹಿತಿಗಳನ್ನು ಕಾರ್ಮಿಕರ ಕುಟುಂಬಗಳಿಗೆ ಹಾಗೂ ಸಮುದಾಯಕ್ಕೆ ದೊರಕುವಂತೆ ಮಾಡಬೇಕು. ಈಗಿನ ಸದ್ಯದ ಸನ್ನಿವೇಶದಲ್ಲಿ ಕಾರ್ಮಿಕರು ಗಂಭೀರವಾದ ವೃತ್ತಿಗೆ ಸಂಬಂಧಪಟ್ಟ ಕಾಯಿಲೆಗಳಾದ ಸಿಲಿಕೋಸಿಸ್ ಹಾಗೂ ಕ್ಷಯದಿಂದ ಬಳಲುತ್ತಿದ್ದು, ಸ್ವತಂತ್ರವಾಗಿ ಕೆಲಸ ಮಾಡಬಲ್ಲ ವೈದ್ಯಕೀಯ ಪರೀಕ್ಷಾ ಸಮಿತಿ ಹಾಗೂ ದೂರು ಪರಿಹಾರ ವಿಭಾಗದ ಅಗತ್ಯ ತುಂಬಾ ಇದೆ.

ಇದನ್ನು ಗಣಿ ಸಚಿವಾಲಯವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ರಚಿಸಿ ಗಣೀ ಪ್ರದೇಶದ ಸರ್ವೇಕ್ಷಣೆಯೊಂದಿಗೆ ಬೇಕಾದ ವೈದ್ಯಕೀಯ ವರದಿಯನ್ನು ತಯಾರಿಸಬೇಕಾಗಿದೆ. ಸಮಿತಿಯಲ್ಲಿ ನುರಿತ ಮಹಿಳಾ ವೈದ್ಯೆ ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳು ಇದ್ದು; ಇವರು ಮಹಿಳಾ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಬೇಕು. ಈ ತಪಾಸಣೆಯನ್ನು ನಡೆಸುವಲ್ಲಿ ಪಾರದರ್ಶಕತೆ ಇದೆ ಎನ್ನುವ ಭರವಸೆಯನ್ನು ನೀಡಬೇಕು. ಈ ಮಾಹಿತಿಗಳನ್ನು ಸಾರ್ವಜನಿಕ ಪರಿಶೀಲನೆಗೆ ನೀಡಬೇಕು.

೨೦. ಗಣಿ ಸಚಿವಾಲಯವು ಅದರ ಎಲ್ಲ ಯೋಜನೆಗಳ ಬಜೆಟಿಂಗ್‌ನಲ್ಲಿ ಲಿಂಗಸೂಕ್ಷ್ಮತೆಯನ್ನು ತರಬೇಕಾಗುತ್ತದೆ ಲಿಂಗ ಸೂಕ್ಷ್ಮ ಬಜೆಟಿಂಗ್ ಎಂದರೆ ಮಹಿಳೆಯರಿಗೆ ಉದ್ಯೋಗದ ಅವಕಾಶ ನೀಡುವ್ವದು, ಅವರಿಗೆ ತರಬೇತಿ, ಉಪಕರಣಗಳು, ಕೆಲಸ ಸಾಧನಗಳು, ಮಹಿಳಾ ಕೆಲಸಗಾರರ ಕೌಶಲ್ಯಗಳನ್ನು ಹೆಚ್ಚಿಸುವುದಕ್ಕೆ ಸಂಶೋಧನೆ ಕೈಗೊಳ್ಳವುದು, ಗಣಿ ಚಟುವಟಿಕೆಯ ಪ್ರದೇಶದಲ್ಲಿ ಮಹಿಳಾ ಕಾರ್ಮಿಕರ ರಕ್ಷಣೆಗಾಗಿ ಸುಧಾರಿತ ಗಣಿ ವಿಧಾನಗಳು, ಮಹಿಳಾ ಸಂಬಂಧಿತ ಯಾವುದೇ ಅಭಿವೃದ್ಧಿ ಮತ್ತು ರಕ್ಷಣಾ ಸಾಧನಗಳ ಮೇಲೆ ವೆಚ್ಚ ಮಾಡುವುದು ಹಾಗೂ ಕಾರ್ಮಿಕರಿಗೆ ಹಾಗೂ ಸಮುದಾಯದಲ್ಲಿನ ಮಹಿಳೆಯರಿಗಾಗಿ ರಕ್ಷಣೆಗೆ ವಿಧಾನಗಳನ್ನು ತರುವುದು, ದೂರು ಪರಿಹಾರ, ವೈದ್ಯಕೀಯ ಹಾಗೂ ಅಪಘಾತ ಸವಲತ್ತುಗಳು, ವಿಮೆ ಹಾಗೂ ನಿವೃತ್ತಿ ವೇತನ, ಮಹಿಳಾ ಕಾರ್ಮಿಕರ ವೈದ್ಯಕೀಯ ತಪಾಸಣೆ ಮೇಲಿನ ವೆಚ್ಚ, ಆಡಳಿತ ಕಾರ್ಯನಿರ್ವಹಣೆ ಹಾಗೂ ತಾಂತ್ರಿಕ ಮಟ್ಟದಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳುವುದು, ಇವೆಲ್ಲವೂ ಲಿಂಗಸೂಕ್ಷ್ಮ ಬಜೆಟ್ಟಿನಲ್ಲಿ ಸ್ಥಿರಿರುತ್ತವೆ. ಸಚಿವಾಲಯವು ಇವುಗಳನ್ನೆಲ್ಲಾ ಒದಗಿಸಲು ಗಣಿಗಳ ಮೇಲೆ ಒತ್ತಡ ತರಬೇಕು.

೨೧. ಸ್ವತಂತ್ರವಾದ ಲಿಂಗ ಸೂಕ್ಷ್ಮ ಲೆಕ್ಕ ಪರಿಶೋಧನೆಯನ್ನು (ಇಲ್ಲಿ ಮಹಿಳಾ ಕಾರ್ಮಿಕರ ಮೇಲೆ ಹಾಗೂ ಪುರುಷ ಕಾರ್ಮಿಕರ ಮೇಲೆ ಮಾಡುವ ವೆಚ್ಚದ ಪ್ರತ್ಯೇಕ ಅಂದಾಜು ದೊರಕುತ್ತದೆ) ಕಾಲಕಾಲಕ್ಕೆ ಮಾಡಬೇಕು. ಅದನ್ನು ಸಣ್ಣ ಪ್ರಮಾಣದ ಗಣಿ ಹಾಗೂ ದೊಡ್ಡ ಪ್ರಮಾಣದ ಗಣಿಗೆ ಪ್ರತ್ಯೇಕವಾಗಿ ಮಾಡಬೇಕು. ಈ ಚಟುವಟಿಕೆಯಲ್ಲಿ ಮಹಿಳಾ ಕಾರ್ಮಿಕರ ಭಾಗವಹಿಸುವಿಕೆಯನ್ನು ಸ್ಪಷ್ಟವಾಗಿ ತೋರಿಸುವ ಮಾರ್ಗಸೂಚಿಗಳಿರಬೇಕು. ಗಣಿ ಗುತ್ತಿಗೆ ನೀಡುವಾಗಲೇ ಪೂರ್ವ ನಿಬಂಧನೆಯನ್ನು ಹಾಕಿ ಲಿಂಗ ಲೆಕ್ಕ ಪರಿಶೋಧನೆಯನ್ನು ಯೋಜನೆಯಲ್ಲಿ ಕಡ್ಡಾಯಗೊಳಿಸಬೇಕು.



***Dhaatri Resource Centre for Women and Children***
*307, Manasarovar Heights, Phase I, Tirumalgiri*
*Secunderabad 500 009, Andhra Pradesh, India*
*Telephone: +91-40-40121365*
*&*
***Samata***
*D. No.: 14-37-9, First Floor, Krishna Nagar, Maharanipet*
*Visakhapatnam 530 002, Andhra Pradesh, India*
*Telefax: +91-891-2737662/2737653*

*Email: dhaatri@gmail.com, samataindia@gmail.com*
*Website: www.dhaatri.org, www.samataindia.org*